
ಡಾ. ಎಂ. ಎಸ್. ಸುಂಕಾಪುರ

ವ್ಯಕ್ತಿ ಪರಿಚಯ



ಡಾ. ಸಿ. ಕೆ. ನಾವಲಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ - ೨೫

ಡಾ. ಎಂ.ಎಸ್. ಸುಂಕಾಪುರ

ವ್ಯಕ್ತಿ ಪರಿಚಯ

ಡಾ. ಸಿ. ಕೆ. ನಾವಲಗಿ

ಕನ್ನಡ ಪ್ರಾಧ್ಯಾಪಕರು

ಜೆ.ಎಸ್.ಎಸ್. ಕಾಲೇಜು, ಗೋಕಾಕ – 591 307

ಕರ್ನಾಟಕ ಜಾನಪದ ಪರಿಷತ್ತು

ನಂ.1, ಜಲದರ್ಶಿನಿ ಬಡಾವಣೆ,

ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,

ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

DR. M. S. SUNKAPURA -
A pen portrait - by Dr. C.K. NAVALAGI.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 40 Price : Rs.15 2008.

ಪ್ರಥಮ ಮುದ್ರಣ ೨೦೦೮

ಪ್ರತಿಗಳು ೨೦೦೦

ಪುಟಗಳು ೪೦

ಬೆಲೆ : ರೂ. ೧೫ (ಹದಿನೈದು ರೂಪಾಯಿ)

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ವಿದ್ವಾಂಸರಾದ **ಡಾ. ಸಿ. ಕೆ. ನಾವಲಗಿ ಅವರು ಡಾ. ಎಂ.ಎಸ್. ಸುಂಕಾಪುರ** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೩೦–೦೬–೨೦೦೮

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಡಾ. ಎಂ.ಎಸ್. ಸುಂಕಾಪುರ

1. ಬಾಲ್ಯ–ಶಿಕ್ಷಣ–ಉದ್ಯೋಗ

ಕನ್ನಡ ಪಂಡಿತರು, ಜಾನಪದ ವಿದ್ವಾಂಸರು ಹಾಗೂ ಸರಸಸಜ್ಜನಿಕೆಯ 'ಹಾಸ್ಯ ಪ್ರಿಯ' ರೆಂದು ಕನ್ನಡ ಸಾರಸ್ವತ ಪ್ರಪಂಚದಲ್ಲಿ ಚಿರಪರಿಚಿತರಾದವರು ಡಾ. ಎಂ.ಎಸ್. ಸುಂಕಾಪುರ ಅವರು. ಅವರು ಶಿಷ್ಟಪದಕ್ಕಿಂತಲೂ ಹೆಚ್ಚಿನ ಒಲವು ಜಾನಪದದ ಬಗೆಗೆ ಇರಿಸಿಕೊಂಡು, ಇಲ್ಲಿಯೇ ತುಂಬ ಕೆಲಸ ಮಾಡಿ ಹೆಸರು ಗಳಿಸಿದರು. ಮೂಲತಃ ಗ್ರಾಮೀಣದವರಾದುದರಿಂದ, ಗ್ರಾಮೀಣ ಬದುಕು, ಸಾಹಿತ್ಯ, ಸಂಸ್ಕೃತಿಗಳಿಂದ ಸಹಜವಾಗಿಯೇ ಪ್ರಭಾವಿತರಾದರು; ಮೇಲಾಗಿ ಅವರ ತಂದೆ ಮುತ್ತಾತರಿಂದ ಜನಪದ ಸೊಗಡು ಅವರಲ್ಲಿ ವಂಶಪರಂಪರಾಗತವಾಗಿ ಹರಿದುಬಂದಿದೆ. ಅವರ ಹಾಸ್ಯ ಪ್ರವೃತ್ತಿಗೆ ಜನಪದ ಭಾಷೆ–ನುಡಿ ನುಡಿಗಟ್ಟುಗಳು ಮತ್ತಷ್ಟು ಪುಟಕೊಟ್ಟಿವೆ. ಮಾತುಮಾತಿಗೆ ನಗೆಯ ಬುಗ್ಗೆಯನ್ನು ಚಿಮ್ಮಿಸುವ ಕಲೆಗಾರಿಕೆಯನ್ನು ಕರಗತಮಾಡಿಕೊಂಡಿದ್ದರು. ಸುಂಕಾಪುರ ಹುಟ್ಟು ನಗೆಗಾರರಾದುದರಿಂದಲೇ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಎನ್ನುವ ಸಂಪ್ರಬಂಧ ಬರೆಯಲು ಸಾಧ್ಯವಾದಂತೆ ತೋರುತ್ತದೆ.

ಡಾ. ಎಂ.ಎಸ್. ಸುಂಕಾಪುರ ಅವರ ಪೂರ್ಣ ಹೆಸರು ಮರಿಬಸಪ್ಪ ಸಣಬಸಪ್ಪ ಸುಂಕಾಪುರ; ತಂದೆ ಸಣಬಸಪ್ಪ, ತಾಯಿ ಸಿದ್ದಮ್ಮ; ಇವರ ನಾಲ್ಕನೆಯ ಮಗುವಾಗಿ ಗದಗ ಜಿಲ್ಲೆ (ಈಗಿನ) ಮುಳಗುಂದದಲ್ಲಿ 1921 ಜನವರಿ 10 ರಂದು ಜನಿಸಿದರು. ಹಳ್ಳಿಯ ಜೀವನ – ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿಯೇ ಬೆಳೆದರು. ಒಕ್ಕಲುತನ ಮನೆಯಾದ್ದರಿಂದ ದನಕರುಗಳಿಗೆ ಮೇವು ಹಾಕುವುದು, ನೀರು ಕುಡಿಸುವುದು, ಮೈ ತಿಕ್ಕುವುದು;

ಸುಗ್ಗಿ ಸಮಯದಲ್ಲಿ ಹೊಲದಲ್ಲಿ (ಕಣದಲ್ಲಿ) ಮಲಗುವುದು, ಹಂತಿ ಹೊಡೆಯುವುದು, ರಾಶಿ ಮಾಡುವುದು– ತೂರುವುದು.... ಒಂದೇ ಎರಡೇ ಹಲವಾರು ಕೆಲಸಗಳಲ್ಲಿ ಹುಡುಗ ಮರಿಬಸಪ್ಪ, ಮನೆಯವರಿಗೆ ನೆರವಾಗುತ್ತಿದ್ದ. ಒಕ್ಕಲಿಗರು ಹಾಡುವ ಹಾಡುಗಳನ್ನು ಆಲಿಸುತ್ತಿದ್ದ; ಅಷ್ಟೇ ಅಲ್ಲ! ಅವುಗಳನ್ನು ಅನುಕರಿಸಿ ರಾಗಬದ್ಧವಾಗಿ ಹಾಡುತ್ತಿದ್ದ. ಹಂತಿ ಹಾಡು, ಬಂಡಿಯ ಹಾಡು, ಬೀಸುವ ಹಾಡು, ಕಪ್ಪಲಿ ಹಾಡುಗಳನ್ನು ಆಲಿಸುವುದು, ಹಾಡುವುದು ಆತನಿಗೆ ರೂಢಿಯಾಗಿ ಹೋಯ್ತು. ಬೀಗತಿಯರ ಹಾಡು, ಸೋಬಾನದ ಹಾಡು, ಭಜನೆಯ ಪದ, ಲಾವಣಿ, ದುಂದುಮೆ, ಹೋಳಿ ಹಾಡು, ಹರದೇಶಿ–ನಾಗೇಶಿ ಮುಂತಾದ ಹಾಡುಗಳ ಮೇಳನೆರೆದಲ್ಲಿ ಮರಿಬಸಪ್ಪ ಹಾಜರಾಗುತ್ತಿದ್ದ. ಗುನುಗುನಿಸುತ್ತಲೇ ನಡೆದ. ಜನಪದ ಸಾಹಿತ್ಯ–ಕಲೆಗಳತ್ತ ಸಹಜವಾಗಿ ವಾಲಿದ. ಮೈ ಮನಕ್ಕೆ ಅಂಟಿಸಿಕೊಂಡ. ಆಗ ಓಣಿಗೊಂದೊಂದು ಬಯಲಾಟ ಮೇಳಗಳು. ಪುಟ್ಟ ಮಗು, ಮರಿಬಸಪ್ಪ ಆಟದ ವೇಷಭೂಷಣ– ಸಂಗೀತ ಕುಣಿತಾದಿಗಳಿಂದ ಕುತೂಹಲಿಯಾಗುತ್ತಿದ್ದ. ತಾನೂ ಅವರಂತೆ ಯಾಕಾಗಬಾರದೆಂದು ಯೋಚಿಸುತ್ತಿದ್ದ.

ಸುಂಕಾಪುರ ಮನೆತನದವರು ಬಯಲಾಟದ ಕಲೆಗೆ ಹಿರಿಯ ಪೋಷಕರಾಗಿಯೂ ಪಾತ್ರಧಾರಿಯಾಗಿಯೂ ಕತೆಗಾರರಾಗಿಯೂ ಅದನ್ನು ಬೆಳೆಸಿಕೊಂಡು ಬಂದಿದ್ದರು. ಮರಿಬಸಪ್ಪ ಹಾಡಕ್ಕಿ ಮನೆಯಲ್ಲಿ ಹಾಜರಾಗಿರುತ್ತಿದ್ದ. ತಾನು ಓದುಬಲ್ಲವನಾದುದರಿಂದ ನಿರಕ್ಷರಿಗಳಿಗೆ ಮಾತು, ಹಾವಭಾವ ಹೇಳಿಕೊಡುವುದು, ಹಾಡಿನ ಧಾಟಿ ಹೇಳುವುದು ಮಾಡುತ್ತಿದ್ದರು. ಎಲ್ಲ ಪಾತ್ರಧಾರಿಗಳ ಮಾತು ಈತನಿಗೆ ಮುಖೋದ್ಗತ. ಅಷ್ಟೊಂದು ನೆನಪಿನ ಶಕ್ತಿ ಮರಿಬಸಪ್ಪನಿಗೆ. ಆತನು ಪ್ರಾಥಮಿಕ ಶಾಲೆಯಲ್ಲಿರುವಾಗಲೇ ಬಯಲಾಟದಲ್ಲಿ ಪಾತ್ರವಹಿಸಿದ್ದನು. ಒಮ್ಮೆ ದೊಡ್ಡಾಟದಲ್ಲಿ ನಾರದನಾಗಿದ್ದ, ಸಣ್ಣಾಟದಲ್ಲಿ ಸಖಿಪಾತ್ರವಹಿಸಿದ್ದ.

ಸೀತೆಯ ಪಾತ್ರವಹಿಸಿಕೊಡು ವೇಷಕಟ್ಟಿ, ಹಾಡಿ ಕುಣಿದು ವಾಹವ್ವಾ ಎನಿಸಿಕೊಂಡಿದ್ದನಂತೆ. ಅಷ್ಟೊಂದು ಬಯಲಾಟದ ಗೀಳು ಬಾಲ್ಯದಲ್ಲಿಯೇ ಚಿ। ಮರಿಬಸಪ್ಪನಿಗಿತ್ತೆಂದು ಆತನ ಆತ್ಮೀಯ ಒಡನಾಡಿ ರುದ್ರಯ್ಯ ಚಂದ್ರಯ್ಯ ಹಿರೇಮಠ (ಆರ್.ಸಿ. ಹಿರೇಮಠ) ಹೇಳುತ್ತಾರೆ. ಈ ಜಾನಪದ ಕಲೆಗಳ ಪ್ರಭಾವ ಅವರ ನಾಟಕಗಳ ಮೇಲಾದುದು ಕಂಡುಬರುತ್ತದೆ.

ಎಂ.ಎಸ್. ಸುಂಕಾಪುರ ಶಾಲೆಯಲ್ಲಿ ಕಲಿತುದಕ್ಕಿಂತಲೂ ಹೊರಜೀವನದಲ್ಲಿ ತುಂಬ ಕಲಿತರು. ಕನ್ನಡವನ್ನು ತುಂಬ ಸುಂದರವಾಗಿ ಬಾಲ್ಯದಲ್ಲಿಯೇ ಬರೆಯುವುದನ್ನು ರೂಢಿಸಿಕೊಂಡಿದ್ದರು. ಅವರು ಮುತ್ತಿನಂಥ ಅಕ್ಷರಗಳನ್ನು ಬರೆಯುತ್ತಿದ್ದರು. ಗಣಿತ, ಬಾಯಿಲೆಕ್ಕ, ಇತಿಹಾಸ, ಭೂಗೋಲ ವಿಷಯಗಳಲ್ಲಿ ಪ್ರತಿಭಾವಂತರಾಗಿದ್ದರು. ಅವರು ಮುಲ್ಕೀ ಪರೀಕ್ಷೆಯಲ್ಲಿ ಗದುಗಿನ ಕೇಂದ್ರಕ್ಕೆ ನಂಬರು ಬಂದಿದ್ದರು. ಮುಳಗುಂದ, ಗದಗ, ಬೆಳಗಾವಿಗಳಲ್ಲಿ ವ್ಯಾಸಂಗ ಮಾಡಿದರು.

ಗದುಗಿನ ಮುನಿಸಿಪಲ್ ಹೈಸ್ಕೂಲಿಗೆ ಸೇರಿದರು. ಪಠ್ಯದಂತೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಚುರುಕಾಗಿದ್ದರು. ಆಗಲೇ ಗೆಳೆಯರ ಗುಂಪನ್ನು ಕಟ್ಟಿಕೊಂಡು ನಗುವುದು, ನಗಿಸುವುದು ಮಾಡುತ್ತಿದ್ದರು. ಅವರದು 'ಸೃಜನಶೀಲ ನಗು'. ಆ ನಗುವಿನಲ್ಲಿಯೂ ತಮ್ಮ ಪ್ರತಿಭೆಯನ್ನು ಆಗಲೇ ತೋರ್ಪಡಿಸಿದ್ದುದುಂಟು; ವಿಡಂಬನಶಕ್ತಿಯನ್ನು ಆಗಲೇ ಗಳಿಸಿಕೊಂಡರು. ಮುಂಬೈ ವಿಶ್ವವಿದ್ಯಾಲಯ ನಡೆಸುತ್ತಿದ್ದ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಅಧಿಕ ಗುಣ ಪಡೆದು ಉತ್ತೀರ್ಣರಾದರು. 1941ರಲ್ಲಿ ಬೆಳಗಾವಿ ಲಿಂಗರಾಜ ಕಾಲೇಜ್ ಸೇರಿ ವ್ಯಾಸಂಗ ಮುಂದುವರಿಸಿದರು. ಅಲ್ಲಿ ಆರ್ಟ್ಸ್ ವಿಷಯಗಳ ಜೊತೆಗೆ 'ಗಣಿತ' ಒಂದು ವಿಷಯ ಆಯ್ದುಕೊಂಡರು. ಕಾಲೇಜು ವಿದ್ಯಾರ್ಥಿ ಆಗಿರುವಾಗಲೇ ಏಕಾಂಕ ನಾಟಕ ರಚಿಸಿದರು. ರಂಗಾಭಿನಯದಲ್ಲಿ ತಮ್ಮ ಅಪ್ರತಿಮ ಪ್ರತಿಭೆಯನ್ನು ಮೆರೆದರು. ಮೂಲತಃ ಹಳ್ಳಿಯ ರೈತಾಪಿ ಕುಟುಂಬದಿಂದ

ಬಂದವರಾದ್ದರಿಂದ ಜನಪದ ಜೀವನ–ಕಲೆ–ಸಾಹಿತ್ಯ–ಸಂಗೀತಗಳ ಪ್ರಭಾವ ವಲಯದಲ್ಲಿಯೇ ಅವರ ವ್ಯಕ್ತಿತ್ವ ರೂಪುಗೊಳ್ಳತೊಡಗಿತು. ನಿಜವಾಗಿಯೂ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿಯೇ ಸುಂಕಾಪುರರ ವ್ಯಕ್ತಿತ್ವ ಅರಳಿತು. ಅವರು ತಮ್ಮ 'ವಿದ್ಯಾಭ್ಯಾಸದಿಂದ, ನಗೆಯ ಲಹರಿಯಿಂದ, ಮಾತಿನ ಚುರುಕಿನಿಂದ; ನಟರಾಗಿ, ನಾಟಕಕಾರರಾಗಿ, ಹರಟೆಮಲ್ಲರಾಗಿ, ಮೆರೆದುದು ಈ 'ಆವರಣದಲ್ಲಿಯೇ' ಎಂದು ಅವರ ಆತ್ಮೀಯ ಗೆಳೆಯ ಆರ್.ಸಿ. ಹಿರೇಮಠ ಅವರೂ ಹೇಳುತ್ತಾರೆ. ಕಲಿಯುವಾಗಲೇ ದೀನರು ದಲಿತರು, ಬಡವರ ಬಗೆಗೆ ಅನುಕಂಪೆಯುಳ್ಳವರಾಗಿದ್ದರು. ಹಿರಿಯಮಿತ್ರ ಆರ್.ಸಿ. ಅಂಥವರಿಗೆ ಬಾಲ್ಯದಲ್ಲಿ ಕಲಿಯುವಾಗಲೇ ನಾನಾ ರೀತಿಯ ನೆರವು ನೀಡಿದ ಉದಾರಿ ಸುಂಕಾಪುರ. ತಮ್ಮ ಮನೆಯ ಆಳುಮಕ್ಕಳಿಗೆ, ಬಡಸಂಬಂಧಿಕರಿಗೆ, ಬಡವಿದ್ಯಾರ್ಥಿಗಳಿಗೆ, ನಾಲ್ಕನೇ ದರ್ಜೆಯ ನೌಕರರಿಗೆ ಸುಂಕಾಪುರ ಸಹಾಯ–ಸಹಕಾರ ಹಣದ ರೂಪದಲ್ಲಿ, ಬಟ್ಟೆಯ ರೂಪದಲ್ಲಿ, ಮದುವೆ ಮಾಡಿಸುವ ರೂಪದಲ್ಲಿ.... ನೀಡಿದುದು ಸಾಕಷ್ಟಿದೆ. ಹಾಗಂತ ಅವರೇನು ದೊಡ್ಡ ಶ್ರೀಮಂತ ಕುಟುಂಬದಿಂದ ಬಂದವರಲ್ಲ; ಇದ್ದುದರಲ್ಲಿಯೇ ಇಲ್ಲದವರಿಗೆ ಸಹಾಯ ಮಾಡುತ್ತ ಬಂದಿದ್ದಾರೆ. ಅವರ ಮನಸ್ಸು ತುಂಬ ದೊಡ್ಡದೆಂದು ಕಂಡವರೆಲ್ಲರ ಅನುಭವ.

ಸುಂಕಾಪುರರ ಮಾತಿನಲ್ಲಿ ಗ್ರಾಮಜೀವನದ ಸಂವೇದನೆ ಪ್ರಖರವಾಗಿತ್ತು. ಕನ್ನಡವೆಂದರೆ ಅವರ ಕಂಠ ಉಬ್ಬಿ ನಿಲ್ಲುತ್ತಿತ್ತು. ಗೋಕಾಕ ಚಳವಳಿಯ ಸಂದರ್ಭದಲ್ಲಿ – 'ಕನ್ನಡಕ್ಕಾಗಿ ರಕ್ತಚೆಲ್ಲುವುದಾಗಿ' ಸುಂಕಾಪುರ ಘೋಷಿಸಿದ್ದು ಇನ್ನೂ ಕಿವಿಗಳಲ್ಲಿ ದುಮುದುಮಿಸುತ್ತಿದೆ. ಅದ್ಭುತವಾದ ಸಂಯೋಜಕ–ಶಕ್ತಿಯನ್ನು ವಿದ್ಯಾರ್ಥಿದೆಸೆಯಲ್ಲಿಯೇ ಹೊಂದಿದ್ದರು. ಎಂದೂ ನಗಲಾರದ ಕಲ್ಲುಮೂರ್ತಿಗಳಂತೆ ಗಂಭೀರವಾಗಿರುತ್ತಿದ್ದ ಡಾ। ಎಸ್.ಸಿ. ನಂದೀಮಠ ಮತ್ತು ಡಾ। ಜಿ.ಎಸ್. ಪರಮಶಿವಯ್ಯರಂಥ ಪ್ರಾಚಾರ್ಯರನ್ನು ಬಿದ್ದು ಬಿದ್ದು ನಗುವಂತೆ, ತನ್ನ ಹಾಸ್ಯಭರಿತ

ಚತುರೋಕ್ತಿಗಳಿಂದ ಮಾಡಿದವರು ಸುಂಕಾಪುರ. ಎಂದೂ ನಗದವರನ್ನು ನಗಿಸುವ ಕಲೆ ಸುಂಕಪುರರಲ್ಲಿ ಮನೆಮಾಡಿಕೊಂಡಿತ್ತು. ಸುಂಕಾಪುರ ಅವರ 'ನಗೆ, ಬೂದಿ ಮುಚ್ಚಿದ ಕೆಂಡ, ಊದಿದಷ್ಟು ಪ್ರಜ್ವಲ. ನಗುತ್ತ, ನಗಿಸುತ್ತ ಕಾಲೇಜ್ ಜೀವನ ಕಳೆದವರು ಸುಂಕಾಪುರ.

ಬಿ.ಎ. ಪರೀಕ್ಷೆಗೆ ಕನ್ನಡ ಮುಖ್ಯ ವಿಷಯ ಆಯ್ದುಕೊಂಡು ಪ್ರಥಮ ವರ್ಗದಲ್ಲಿ ಪ್ರಥಮ ರ್‍ಯಾಂಕ್‌ನಲ್ಲಿ ಪಾಸಾದರು. ಹಾಗೆ ನೋಡಿದರೆ ಅವರು ಓದುವುದು ಕಡಿಮೆ. ಪರೀಕ್ಷೆ ಸಮೀಪಿಸಿದಾಗ ಮಾತ್ರ ಹೆಚ್ಚು ಓದುವವರು. ಕ್ರೀಡೆ-ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೇ ಹೆಚ್ಚು ವೇಳೆಯನ್ನು ಕಳೆದರು. ಎಂ.ಎ. ಕೂಡ ಉತ್ತಮ ದರ್ಜೆಯಲ್ಲಿ ಪಾಸುಮಾಡಿದರು. ಕಾಲೇಜಿನಲ್ಲಿ ದಕ್ಷಿಣಾ ಫೆಲೋ ಎಂದು ನೇಮಣೂಕಿಕೊಂಡರು.

ಯಾವ ಕ್ಷೇತ್ರದಲ್ಲಿಯೇ ಆಗಲಿ, ತಮ್ಮ ಸ್ಫುಟವಾದ ಪ್ರಭಾವವನ್ನು ಬೀರುವ ವ್ಯಕ್ತಿತ್ವದ ಸುಂಕಾಪುರ "ಓದಿನಲ್ಲಿ, ಬರಹದಲ್ಲಿ, ಮಾತಿನಲ್ಲಿ, ಮನದಲ್ಲಿ, ರೀತಿಯಲ್ಲಿ, ಹಾಸ್ಯದಲ್ಲಿ, ಅಧ್ಯಯನದಲ್ಲಿ, ಅಧ್ಯಾಪನದಲ್ಲಿ – ಎಲ್ಲದರಲ್ಲಿಯೂ ಪುಟವಿಕ್ಕಿದ ಚಿನ್ನದಂತೆ ಥಳಥಳನೆ ಹೊಳೆಯುತ್ತ ಬಂದಿದ್ದಾರೆ".

ಶಿರಗಾಂವಕರ ಸಾಹೇಬರ ಹಿರಿಯಮಗಳು ಶಾಂತಕ್ಕ ಸುಂಕಾಪುರ ಅವರ ಧರ್ಮಪತ್ನಿ. ಅವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು; ಒಬ್ಬ ಗಂಡುಮಗ. ಒಟ್ಟು ಐವರು ಮಕ್ಕಳು (ಜಯಶ್ರೀ, ಶೋಭಾ, ಪುಷ್ಪಾ, ಸಂಗೀತಾ, ಮಗ ಸಂಗಮೇಶ) ಎಲ್ಲರೂ ಪ್ರತಿಭಾವಂತರು, ಸುಂಕಾಪುರ ತುಂಬ ಸಂಗೀತಪ್ರೇಮಿ; ಅದರ ಸಂಕೇತವಾಗಿಯೋ ಏನೋ ತಮ್ಮ ಕೊನೆಯ ಮಗಳಿಗೆ 'ಸಂಗೀತಾ' ಎಂದು ಹೆಸರಿಟ್ಟಿದ್ದಾರೆ. ಅವರದು ರಸಮಯ ಕೌಟುಂಬಿಕ ಜೀವನ. ಅವರು ಇರುವ ಪರಿಸರದಲ್ಲೆಲ್ಲ ಹಾಸ್ಯದ ಲಾಸ್ಯ, ಹಾಸ್ಯದ ವಿಲಾಸ ಬುಗ್ಗೆ ಬುಗ್ಗೆಯಾಗಿ ಹರಿಯಲೇಬೇಕು.

ಬಾಲ್ಯದಿಂದಲೇ ಹಾಸ್ಯಪ್ರವೃತ್ತಿಯನ್ನು ಮೈಗಂಟಿಸಿಕೊಂಡುಬಿಟ್ಟಿದ್ದರು. ಯಾವ ಸಂದರ್ಭದಲ್ಲಿ, ಎಂಥ ಹಾಸ್ಯವನ್ನು ಹುಟ್ಟಿಸಿ, ಎಂತೆಂಥವರನ್ನು ಸುಂಕಾಪುರ ನಗಿಸಿದ್ದಾರೋ ಲೆಕ್ಕ ಇಡುವವರ್‍ಯಾರು? ಅವರ ಹಾಸ್ಯದ ಪ್ರಸಂಗಗಳನ್ನು ಕುರಿತೇ ಒಂದು ರಸವತ್ತಾದ ಪ್ರಬಂಧ ಬರೆಯಬಹುದು. ಪರಿಶೀಲನೆಗಾಗಿ ಒಂದು ಉದಾಹರಣೆ : ಸುಂಕಾಪುರರ ಮದುವೆಯ ನಿಶ್ಚಿತಾರ್ಥ ದಿನ, ಗಂಡಿನ ಕಡೆಯವರು ಹುಡುಗನಿಗೆ ಎರಡು ಸಾವಿರ ರೂಪಾಯಿ ವರೋಪಚಾರ ಕೊಡಬೇಕು ಎಂದರಂತೆ. ಅದಕ್ಕೆ ಹೆಣ್ಣಿನ ಕಡೆಯವರು 'ಏನ್ರಿ ಕನ್ಯಾನೂ ಕೊಡಬೇಕು; ಮೇಲೆ ಎರಡು ಸಾವಿರ ರೂಪಾಯಿ, ಎರಡೂ ಭಾರ' ಎಂದಾಗ ಸುಂಕಾಪುರ ಅವರು 'ನಿಮಗೆ ಎರಡೂ ಭಾರವಾದರೆ ಎರಡು ಸಾವಿರ ರೂಪಾಯಿ ಕೊಟ್ಟು ಬಿಡಿ, ಕನ್ಯಾ ನಿಮ್ಮಲ್ಲಿಯೇ ಇರಲಿ' ಎಂದರಂತೆ. ಕೂಡಿದ್ದ ಜನ ಖೊಳ್ಳೆಂದು ನಕ್ಕಿತಂತೆ. ಈ ಬಗೆಯ ಹಲವಾರು ಹಾಸ್ಯ ಪ್ರಸಂಗಗಳನ್ನು ಡಾ। ರಾ.ಯ. ಧಾರವಾಡಕರ, ಡಾ. ಎಂ.ಎಂ. ಕಲಬುರ್ಗಿ, ಡಾ. ಆರ್.ಸಿ. ಹಿರೇಮಠ ಮುಂತಾದವರು ಸುಂಕಾಪುರ ಕುರಿತು ಮಾತನಾಡುವಾಗೆಲ್ಲ ಹೇಳುತ್ತಿದ್ದರು.

ಗಟ್ಟಿಮುಟ್ಟ ವ್ಯಕ್ತಿ ಸುಂಕಾಪುರರು. ಸಾದಾಗಪ್ಪು ಬಣ್ಣ, ನಗುಮುಖ, ಸಾಧಾರಣ ಎತ್ತರ, ಸಾಮಾನ್ಯ ನಿಲುವು, ಆರೋಗ್ಯವಂತ ಶರೀರ ಹೊಂದಿದ್ದರು. ಯಾವಾಗಲೂ ಉದ್ದತೋಳಿನ ಷರ್ಟ್ ಪ್ಯಾಂಟು ಧರಿಸುತ್ತಿದ್ದರು. ಮದುವೆಯಲ್ಲಿ ಮಾತ್ರ ಕೋಟು ಧರಿಸಿದ್ದಂತೆ ತೋರುತ್ತದೆ; ಅದೂ 'ಮಾವನ ಕೋಟು'. ಅವರು ಬಾಲ್ಯದಿಂದಲೂ ಅಜಾತಶತ್ರು. ಬಡವರ ಕುರಿತು ಮೊದಲಿನಿಂದಲೂ ಅನುಕಂಪೆ, ಪರಿಶುದ್ಧ ಮನಸ್ಸುಳ್ಳವರು, ಯಾರ ಮೇಲೂ ದ್ವೇಷಾಸೂಯೆ ಇಟ್ಟುಕೊಂಡವರಲ್ಲ; ಪ್ರಫುಲ್ಲಿತವಾದ ಸಾಂಘಿಕ ಜೀವನ ನಡೆಸಿದವರು. ಅಪಾರವಾದ ಗೆಳೆಯರ ಬಳಗ ಹೊಂದಿದ್ದರು. ಅವಿಶ್ರಾಂತವಾಗಿ ದುಡಿಮೆ ಮಾಡಿದವರು.

ಸುಂಕಾಪುರರು ವಿದ್ಯಾರ್ಥಿಯಾಗಿರುವಾಗಲೇ 'ಶೋಭಾ' ಗ್ರಂಥಮಾಲೆ ಆರಂಭಿಸಿದರು. ತಮ್ಮ ಎರಡು ಕೃತಿಗಳನ್ನು ಈ ಮೂಲಕ ಪ್ರಕಟಿಸಿದರು. 'ನಗೆಹೊಗೆ' ಏಕದೃಶ್ಯಗಳ, ಏಕಾಂಕಗಳ ಒಂದು ಉತ್ತಮ ಸಂಗ್ರಹ; 'ಗಪ್‌ಚಿಪ್' ಹರಟೆಗಳ ಸಂಗ್ರಹ ಪ್ರಕಟಿಸಿದರು. ಈ ಕೃತಿಗಳನ್ನು 'ನಗೆಮಾರಿ' ಅಂಕಿತದಿಂದ ಪ್ರಕಟಿಸಿದ್ದಾರೆ. ಈಚೆಗೆ 'ನಮ್ಮ ನಾಟಕಗಳು' – 'ನಾಟಕತ್ರಯ' ಪ್ರಕಟವಾಗಿವೆ. ಹಲವಾರು ರೇಡಿಯೋ ನಾಟಕಗಳನ್ನು ಬರೆದಿದ್ದರು. ಪ್ರಕಟವಾಗದ ಅನೇಕ ನಾಟಕಗಳಿವೆ. 'ಹುಂಬ ಹಕೀಮ' ನಗೆನಾಟಕ ಕೂಡ ಬರೆದಿದ್ದಾರೆ.

ಪ್ರೊ. ಸುಂಕಾಪುರ ಅವರು ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ ಎರಡು ವರುಷ ಸೇವೆ ಸಲ್ಲಿಸಿದರು. ನಂತರ ಬಾಗಲಕೋಟೆ ಬಸವೇಶ್ವರ ಕಾಲೇಜಿನಲ್ಲಿ ಕನ್ನಡ ಪ್ರಧ್ಯಾಪಕರರಾದರು. ಕಲಬುರ್ಗಿ ಸ್ನಾತಕೋತ್ತರ ಕೇಂದ್ರದಲ್ಲಿ (ಇಂದಿನ ಕಲಬುರ್ಗಿ ವಿ.ವಿ) ಯೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಡಾ। ನಂದೀಮಠ ಅಂಥವರು ಮೆಚ್ಚುವಂತೆ ಅಧ್ಯಯನ, ಅಧ್ಯಾಪನ, ಭಾಷಣಗಳಲ್ಲಿ ಸುಂಕಾಪುರ ಖ್ಯಾತಿ ಗಳಿಸಿದರು. ಹಳಗನ್ನಡವನ್ನು ಪಂಪನನ್ನು ನಿಷ್ಠೆಯಿಂದ ಅಭ್ಯಾಸ ಮಾಡಿದರು. ಸಾಂಪ್ರದಾಯಿಕ ವ್ಯಾಕರಣವನ್ನು ಶ್ರದ್ಧೆಯಿಂದ ಓದಿದರು. ಪ್ರೊ. ಕೆ.ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ 'ಕನ್ನಡ ಸಾಹಿತ್ಯದಲ್ಲಿ ಹಾಸ್ಯ' ಕುರಿತು ಮಹಾಪ್ರಬಂಧ ರಚಿಸಿದರು. 1957ರಲ್ಲಿ ಪ್ರಸ್ತುತ ಪ್ರಬಂಧಕ್ಕೆ ಕ.ವಿ.ವಿ. ಡಾಕ್ಟರೇಟ್ ನೀಡಿತು. ಅಷ್ಟೊತ್ತಿಗಾಗಲೇ ಸುಂಕಾಪುರ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದಲ್ಲಿ ರೀಡರ್ ಆಗಿ ನೇಮಕಾತಿ ಹೊಂದಿದ್ದರು.

ಕನ್ನಡ ವಿಭಾಗದ ನಿರ್ದೇಶಕರಾಗಿ, ಅದನ್ನು ಕಟ್ಟುವಲ್ಲಿ, ಬೆಳೆಸುವಲ್ಲಿ ಸುಂಕಾಪುರ ಅವರದೂ ಪಾಲು ಇದೆ. ಪ್ರಾಧ್ಯಾಪಕರಾಗಿ ಅಖಂಡ 32 ವರುಷ ಸೇವೆ ಸಲ್ಲಿಸಿದರು. ವಚನ ಶಾಸ್ತ್ರ, ಕಾವ್ಯ, ವೇದಾಂತ ಮತ್ತು

ವಿವಿಧ ಸಾಹಿತ್ಯ ಕೃತಿಗಳ ರಚನೆ, ಅಲ್ಲದೆ ಹಲವಾರು ಗ್ರಂಥಗಳ ಸಂಪಾದನೆ, ಸೃಜನಶೀಲ ಗ್ರಂಥಗಳ ರಚನೆ, ವಿಮರ್ಶೆ, ನಾಟಕ ಕೃತಿಗಳ ರಚನೆ, ಅಲ್ಲದೆ ಜಾನಪದ ಕ್ಷೇತ್ರದಲ್ಲಿ ಅವರಿಟ್ಟ ದಿಟ್ಟ ಹೆಜ್ಜೆ ಅವರನ್ನು ಸದಾ ಸ್ಮರಣೀಯರನ್ನಾಗಿಸಿವೆ.

ಹದಿನೈದಕ್ಕೂ ಮಿಕ್ಕಿ ವೈವಿಧ್ಯಪೂರ್ಣ ಕೃತಿಗಳನ್ನು 'ಜೀವನ ಜೋಕಾಲಿ' ಗ್ರಂಥಮಾಲೆಯ ಅಡಿಯಲ್ಲಿ ಪ್ರಕಟಿಸಿದ್ದಾರೆ. ಹಾಸ್ಯ ಪೂರ್ಣ ಶೈಲಿಯನ್ನು ಅಳವಡಿಸಿಕೊಂಡ ಶ್ರೇಷ್ಠವಾಗ್ಮಿಗಳು. ಇದರಿಂದಾಗಿಯೇ ಚಿರಪರಿಚಿತರು ಮತ್ತು ಜನಪ್ರಿಯರು. ಸುಂಕಾಪುರ ಅವರನ್ನು ನೋಡಿದರೆ ಸಾಕು ನಗೆಯ ಅಲೆ ತುಟಿಯ ಮೇಲೆ ನಲಿದುಹೋಗುತ್ತದೆ. ಅವರು ಮಾತನಾಡಿದರೆ, ಕೇವಲ ಕತ್ತು ಕೊಂಕಿಸಿದರೂ ಸರಿದೊರೆಯಿಲ್ಲದ ಹಾಸ್ಯದ ಮಿಂಚುಂಟಾಗುತ್ತದೆ.

ಕನ್ನಡ ಅಧ್ಯಯನಪೀಠದ ನಿರ್ದೇಶಕರಾಗಿ ಸೇವಾ ನಿವೃತ್ತಿ ಹೊಂದಿದ್ದರೂ ಯು.ಜಿ.ಸಿ. ಸಂಶೋಧನ ಪ್ರಾಧ್ಯಾಪಕರೆಂದು ನೇಮಕಗೊಂಡರು. ಜನಪದ ರಂಗಭೂಮಿಯನ್ನು ಕುರಿತು ಸಂಶೋಧನ ಪ್ರಬಂಧ ಬರೆಯುವ ಸಾಹಸಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

2. ಜಾನಪದ ಮತ್ತು ಸುಂಕಾಪುರ

ಎಂ.ಎಸ್. ಸುಂಕಾಪುರ ಅವರು ಹತ್ತು ವರುಷದವರಿರುವಾಗಲೇ ಆಟದ ಗುಂಗು ಹಿಡಿಸಿಕೊಂಡಿದ್ದರು. ಇವರ ಓರಗೆಯವರು ಆಡುತ್ತಿದ್ದರೆ, ಹಾಡುತ್ತಿದ್ದರೆ ನಿಂತುನೋಡುವ, ಕೇಳಿ ನಲಿಯುವ ಸ್ವಭಾವದವರಾಗಿದ್ದರು. ಗುಂಡು, ಗಜಗ, ಚಿಣಿಫಣಿ, ಚಂಡಾಟ, ಕುಂಟಾಟ, ಲಗೋರಿ, ತಿಳ್ಳಿ, ಹುಡುತ್ತುತ್ತು ಮುಂತಾದ ನೂರಾರು ಆಟಗಳನ್ನು ಸುಂಕಾಪುರ ವೀಕ್ಷಿಸುತ್ತಿದ್ದರು; ಸ್ವತಃ ಆಡುತ್ತಿದ್ದರು. ಪುಕ್ಕಟೆ ಮನೋರಂಜನೆ ನೀಡುವ ಈ ಆಟಗಳನ್ನು ಮಕ್ಕಳು ಆಡಿದ್ದೇ ಆಡಿದ್ದು, ಬೇಸರ ಬಂದರೆ, ಜಗಳವಾದರೆ

ಆಟ ಆಗಲೇ ನಿಂತುಹೋಗುತ್ತದೆ. ಇವರು 'ಆಡಿದಷ್ಟೇ ಆಟ ಮಾಡಿದಷ್ಟೇ ಮಾಟ'.

ಕೆಲವು ಆಟಗಳಿಗೆ ಹಾಡು, ಕಾಲು ಕುಣಿತ, ಮೈಯ ಕುಣಿತ, ಹಾವಭಾವಗಳಿಗೆ ತಕ್ಕ ಧಾಟಿ, ತಾಳ ಮತ್ತು ಲಯಗಳಿರುತ್ತವೆ. ಆ ಹಾಡುಗಳು ಪ್ರಾಸಬದ್ಧವಾಗಿ, ಲಯಬದ್ಧವಾಗಿಯೂ ಇರುವುದರಿಂದ ಸುಂಕಾಪುರ ಹಾಡುಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತಿದ್ದರು. ಹಾಡುತ್ತಲೇ ಆಡಿದರು. ಆಡುತ್ತಲೇ ಹಾಡಿದರು. ಈ ಗ್ರಾಮೀಣ ಆಟಗಳಿಂದ ಇವರು ತುಂಬ ಸಂತಸಪಟ್ಟಿದ್ದಾರೆ. ಗ್ರಾಮೀಣ ಜೀವನ ಇವರದಾದುದರಿಂದ ಜಾನಪದ ಇವರಿಗೆ ಹತ್ತಿರದ್ದಾಯಿತು, ಒಳಗಿನದಾಯಿತು. ಆಟ ನೋಡನೋಡುತ್ತ, ಆಡ ಆಡುತ್ತ ಜನಪದವೇ ತಾವಾದರು. ಜಾನಪದ ಇವರನ್ನು ಸಂಪೂರ್ಣವಾಗಿ ಆವರಿಸಿಕೊಂಡುಬಿಟ್ಟಿತು. ಅವರೇ ಹೇಳಿದಂತೆ 'ಜಾನಪದ ನನ್ನೊಳಗೋ ನಾನು ಜಾನಪದದೊಳಗೋ' ಎನ್ನುವಂತಾಯ್ತು ನನ್ನ ಬಾಲ್ಯ ಜೀವನ ಎಂದುದು ಅನ್ವರ್ಥಕವಾಯಿತು.

ಗ್ರಾಮೀಣ ಸುತ್ತಲಿನ ಶಕ್ತಿ ದೇವತೆಗಳನ್ನು ನಂಬಿದ್ದರು, ಆರಾಧಿಸುತ್ತಿದ್ದರು. "ಸಂಪ್ರದಾಯಕ್ಕೆ ಬಲಿಬಿದ್ದ ನಾನು ಮನೆಯ ಹಿರಿಯರ ಅಪ್ಪಣೆಯಂತೆ ಈ ದೇವರಿಗೆಲ್ಲ ನೀರು ಹಾಕಿ, ಎಣ್ಣೆ ಬತ್ತಿ, ಕಡಲೆಕಾಳು, ದೇವತೆಗಳ ಮುಂದೆ ಇಟ್ಟುಬಂದ ಅನೇಕ ಸಂದರ್ಭಗಳು ನೆನಪಿನಲ್ಲಿವೆ" ಎನ್ನುತ್ತಾರೆ. ಕಾರೆವ್ವ, ದುರ್ಗವ್ವ, ದ್ಯಾಮವ್ವ, ಮಲೆಯವ್ವ, ಮರೆವ್ವ ಮುಂತಾದ ಕೊಲ್ಲುವ–ಕಾಯುವ ದೇವತೆಗಳಿಗೆ ಪೂಜೆ ಪುನಸ್ಕಾರ, ಕುರಿ, ಕೋಳಿ, ಬಲಿಕೊಟ್ಟರೆ ಅವು ತೃಪ್ತವಾಗಿ ಕಷ್ಟನಷ್ಟ, ರೋಗ ರುಜಿನ ತಂದೊಡ್ಡುವುದಿಲ್ಲವೆನ್ನುವ ಸಾಂಪ್ರದಾಯಿಕ ನಂಬುಗೆಗಳಿಗೆ ಬಾಲಕ ಸುಂಕಾಪುರ ಆಶ್ಚರ್ಯಪಟ್ಟುದುಂಟು.

ಮಂತ್ರ ಮಾಟಗಳ ಬಗೆಗೂ ಕೇಳಿದ್ದರು. ಸ್ವತಃ ನೋಡಿದ್ದರು.

ಚೇಳು ಕುಟುಕಿದರೆ, ನಾಯಿ ಕಚ್ಚಿದರೆ, ಹಾವು ಕಡಿದರೆ ನೀರು ಹಾಕಿಸಿಕೊಳ್ಳುವುದು; ದನಕರುಗಳಿಗೆ ರೋಗ ಬಂದಾಗ, ಅವು ಹಾಲು ಕರೆಯದಿದ್ದಾಗ ಮಂತ್ರಿಸಿದ ನೀರು ಹಾಕುವುದು – ಇದೆಲ್ಲ ಮದ್ದು, ಮಂತ್ರ–ತಂತ್ರಗಳಿಗೆ ಹಳ್ಳಿಗರು ಮಾರುಹೋದಂತೆ ಬಾಲಕ ಸುಂಕಾಪುರ ಕೂಡ ಮಾರುಹೋದುದುಂಟು. ಕಲ್ಲು, ಮಣ್ಣು, ಮರ, ಮಳೆ, ಗಾಳಿ, ಸೂರ್ಯ, ಚಂದ್ರ ಹಳ್ಳಿಗರಿಗೆ ದೇವರು. ಸುಂಕಾಪುರ ಚಿಕ್ಕವರಿದ್ದಾಗ ಈ ಎಲ್ಲ ದೇವರನ್ನು ನಂಬಿದ್ದರು. ಈ ದೇವರುಗಳ ಬಗೆಗೆ ಹಳ್ಳಿಗರು ಹೇಳುವ ಹಾಡುಗಳನ್ನು ಸುಂಕಾಪುರ ಕೇಳಿದ್ದರು, ನೆನಪಿಟ್ಟು ಹಾಡಿದ್ದರು ಕೂಡ.

ಗುಳ್ಳವ್ವನ ಹಬ್ಬದಲ್ಲಿ ಗಂಡು ಹೆಣ್ಣು ಸೇರಿ ಕೆರೆಯ ಮಣ್ಣು ಹೊತ್ತು ತಂದು, ಗುಳಕವ್ವನನ್ನು ಮಾಡಿ, ಪೂಜಿಸಿ, ಸ್ನೇಹಿತರೊಂದಿಗೆ ಭಾಗಿಯಾಗಿ ಹಾಡಿದ್ದಾರೆ, ನಲಿದಿದ್ದಾರೆ. ನಾಗರಪಂಚಮಿಯ ಸಂದರ್ಭದಲ್ಲಿ ಚಂಗಳೆಯನ್ನಿಟ್ಟು ಪೂಜಿಸಿ 'ಸೋ......' ಎಂದು ಹಾಡುವುದನ್ನು ಕೇಳಿ ಸೋಬಾನೆ ಶಬ್ದಕ್ಕೆ ಮಾರುಹೋಗಿದ್ದಾರೆ. ಕುರುಬರು ತಮ್ಮ ಆರಾಧ್ಯದೈವ 'ಬೀರಪ್ಪ' ನನ್ನು ಪೂಜಿಸಿ 'ದೇವರು ಬಂದಾವು ಬನ್ನಿರೆ' ಪಲ್ಲವಿಯೊಡನೆ ಹಾಡುತ್ತಿದ್ದುದನ್ನು ಕೇಳಿಸಿಕೊಂಡಿದ್ದಾರೆ. ಹೋಳಿಹುಣ್ಣಿಮೆಯಲ್ಲಿ ಹಲಿಗೆ ಬಡಿದು ಬಾಯಿ ಬಾಯಿ ಬಡಿದುಕೊಂಡು ಸಮಾಧಾನ ಪಟ್ಟಿದ್ದಾರೆ. ಹೋಳಿ ಹಾಡುಗಳನ್ನು ಬೆಳ್ಳಬೆಳತನಕ ಕೇಳಿದ್ದಾರೆ. ಈ ಇಂಪಾದ ಹಾಡುಗಳಿಂದ ಕುಣಿದು ಕುಪ್ಪಳಿಸಿದ್ದಾರೆ. ಗಣೇಶನ ಹಬ್ಬದಲ್ಲಿ 'ಚೌಪದನ' ಗಳನ್ನು ಕೇಳಿದ್ದಾರೆ. ಸುಗ್ಗಿ ಕುಣಿತ ನೋಡಿದ್ದಾರೆ. ಕೋಲಾಟದ ಹಾಡುಗಳನ್ನು ಕೇಳಿದ್ದಾರೆ. ಹೆಣ್ಣು ಮಕ್ಕಳ ಬೀಸುವ ಕುಟ್ಟುವ, ಕಳೆ ಕೀಳುವ, ಹತ್ತಿ ಬಿಡಿಸುವ ಗರತಿಯ ಹಾಡುಗಳನ್ನು ಕೇಳಿದ್ದಾರೆ. "ಈ ಬಗೆಯ ಸಾಹಿತ್ಯ ನನ್ನ ಕಿವಿಯಲ್ಲಿ ಸುಳಿದು, ಮನದ ಆಳಕ್ಕೆ ಇಳಿದುದು ಸುಳ್ಳಲ್ಲ' ವೆಂದು ತಮ್ಮ ಪ್ರಾಮಾಣಿಕ ಅನಿಸಿಕೆಯನ್ನು ಮುಚ್ಚುಮರೆಯಿಲ್ಲದೆ ಸುಂಕಾಪುರ ಹೇಳಿಕೊಂಡಿದ್ದಾರೆ.

ತನ್ನೂರಿನ ಬಯಲಾಟಗಳಲ್ಲದೆ, ಪರ ಊರಿನ ಬಯಲಾಟ ನೋಡಲು ಸುಂಕಾಪುರ ಮೇಲಿಂದ ಮೇಲೆ ಹೋದುದುಂಟು. ಶಾಲೆ ತಪ್ಪಿಸಿಯೂ ಆಟ ನೋಡಲು ಹೋದುದುಂಟು. ಬಯಲಾಟದ ವೇಷ ಭೂಷಣ, ಬಣ್ಣಗಾರಿಕೆ, ಕುಣಿತ, ಪಕ್ಕವಾದ್ಯ, ಕತೆಗಾರನ ಹಾಡುಗಾರಿಕೆ, ಪಾತ್ರಧಾರಿಗಳ ಮಾತುಗಾರಿಕೆಗಳನ್ನು ಇವರು ಮೆಚ್ಚಿಕೊಂಡಿದ್ದರು. ಒಂದೆರಡು ಬಾರಿ ದೊಡ್ಡಾಟದಲ್ಲಿ ಪಾತ್ರ ಕೂಡ ಮಾಡಿದ್ದಾರೆ. ದೊಡ್ಡಾಟದ ಕುಣಿತ ಇವರಿಗೆ ಕರತಲಾಮಲಕ. ಮುಲ್ಕೀ ಪರೀಕ್ಷೆ ಪಾಸಾಗುವುದರೊಳಗಾಗಿ ಇಷ್ಟೆಲ್ಲ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ, ಸಂಪ್ರದಾಯಗಳಿಂದ ಸುಂಕಾಪುರ ಪ್ರಭಾವಿತರಾಗಿದ್ದರು. ಹಾಯಸ್ಕೂಲ ವಿದ್ಯಾಭ್ಯಾಸಕ್ಕೆ ಪಟ್ಟಣ ಸೇರಿದಾಗಲೂ ಅವರು ಸಮಯಸಾಧಿಸಿ, ತನ್ನೂರಿನ ಬಯಲಾಟಗಳನ್ನು ನೋಡಲು ಊರಿಗೆ ಹೋಗುತ್ತಿದ್ದುದುಂಟು. 'ಜನಪದ ಸಾಹಿತ್ಯ ಒಟ್ಟಿನ ಮೇಲೆ ನನ್ನ ಎಳೆಯ ಮನಸ್ಸನ್ನು ದತ್ತು ಪಡೆದುಕೊಂಡಿತೋ ಏನೋ! ಅದು ನನ್ನಲ್ಲಿ ದೀರ್ಘವಾದ ಪರಿಣಾಮ ಬೀರಿದ್ದಲ್ಲದೆ ಒಂದು ರೀತಿಯ ಸಂಸ್ಕಾರವನ್ನೇ ಮೂಡಿಸಿದಂತೆ ಕಾಣುತ್ತದೆ. ಆದ್ದರಿಂದಲೇ ಜಾನಪದವೆಂದರೆ ನನ್ನ ಮನ ಕುಣಿಯುತ್ತದೆ' ಎಂದಿದ್ದಾರೆ ಡಾ। ಎಂ.ಎಸ್. ಸುಂಕಾಪುರ.

ಸುಂಕಾಪುರ ಕಾಲೇಜಿನಲ್ಲಿ ಓದುವಾಗಲೂ ಜಾನಪದ ಕಲೆ-ಪ್ರದರ್ಶನ ಮರೆಯಲಿಲ್ಲ. ಕಾಲೇಜಿನ ಸ್ನೇಹಸಮ್ಮೇಲನ, ವಿವಿಧ ವಿನೋದಾವಳಿಗಳಲ್ಲಿ ಲಾವಣಿ, ಗೀಗೀ, ಬಯಲಾಟ ಇತ್ಯಾದಿ ಸಾಹಿತ್ಯ ಪ್ರಕಾರಗಳ ಪ್ರದರ್ಶನಕ್ಕೆ ಅವಕಾಶ ಗಿಟ್ಟಿಸಿಕೊಳ್ಳುತ್ತಿದ್ದರು. ಇವರ 'ಬಯಲಾಟ' ಕಾಲೇಜು ವಿದ್ಯಾರ್ಥಿಗಳಿಗೆ ಸಂಭ್ರಮದ ರಸದೂಟವನ್ನು ನೀಡಿದ ಸಂದರ್ಭವೂ ಸೃಷ್ಟಿಯಾಗಿತ್ತು. ಮುಂದೆ ಸುಂಕಾಪುರ ಕಾಲೇಜಿನಲ್ಲಿ ಕನ್ನಡದ ಪ್ರಾಧ್ಯಾಪಕರಾದರು; ವಿಶ್ವವಿದ್ಯಾಲಯದಲ್ಲಿಯೂ ಪ್ರಾಧ್ಯಾಪಕರಾದರು. ಅಲ್ಲಿ ಕನ್ನಡದ ಜತೆಗೆ ಜನಪದ ಸಾಹಿತ್ಯವನ್ನು ಅನಿವಾರ್ಯವಾಗಿ ಅಭ್ಯಾಸ ಮಾಡಿದರು. ಜನಪದ ಸಾಹಿತ್ಯದಲ್ಲಿ ಎಂ.ಎ.

ಪದವಿ ಪಡೆಯುವ ಅವಕಾಶ ಲಭ್ಯವಾಯಿತು. ಈ ಸಂದರ್ಭದಲ್ಲಿ ಎಂ.ಎ. ವಿದ್ಯಾರ್ಥಿಗಳಿಗೆ ಜಾನಪದವನ್ನು ಅರ್ಥಪೂರ್ಣವಾಗಿ, ಸಾಭಿನಯವಾಗಿ ಬೋಧಿಸಿದರು. ಜಾನಪದ ವಿದ್ಯಾರ್ಥಿಗಳ ಮನವನ್ನು ಗೆದ್ದರು. ಜಾನಪದದಲ್ಲಿ ಸಂಪೂರ್ಣವಾಗಿ ಮುಳುಗಿಬಿಡುತ್ತಿದ್ದರು. ಗಂಟೆ ಬಾರಿಸಿದ್ದು ಗೊತ್ತೇ ಆಗುತ್ತಿರಲಿಲ್ಲ. ವಿದ್ಯಾರ್ಥಿಗಳಾದ ನಾವೇ ವೇಳೆಯಾದುದನ್ನು ನೆನಪಿಸಿದಾಗ ತರಗತಿಯಿಂದ ಹೊರನಡೆಯುತ್ತಿದ್ದರು. ಜಾನಪದ ಕಾವ್ಯಗಳನ್ನು ಭಾವಪೂರ್ಣವಾಗಿ ರಸಗ್ರಹಣ ಮಾಡಿ ಅಧ್ಯಾಪನ ಮಾಡುತ್ತಿರುವುದನ್ನು ನೋಡಿ ಬೆರಗಾಗಿದ್ದೇವೆ. ಯಾರಾದರೂ ಸತ್ತಲ್ಲಿ ಮಣ್ಣು ಕೊಡಲು ಹೋದರೆ, ಅವರ ಲಕ್ಷ್ಯವೆಲ್ಲ ಹಲಗೆ ಬಾರಿಸುವವನ ಕಡೆಗೇ ಇರುತ್ತಿತ್ತು; ಮದುವೆಗೆ ಹೋದರೆ 'ಕರಡಿ ಮಜಲಿ' ನ ಕಡೆಗೇ ಮನಸ್ಸನ್ನು ಕೇಂದ್ರೀಕರಿಸಿಬಿಡುತ್ತಿದ್ದರು. ಮಾರ್ಕೆಟ್ಟಿಗೆ ಧರ್ಮಪತ್ನಿಯೊಂದಿಗೆ ಹೋಗಿ, ಅಲ್ಲಿ ಹಾವುಗಾರರಾಟ, ಇಲ್ಲಾ 'ದರುಗಮುರಗಿ'... ನೋಡುತ್ತಾ ನಿಂತುಬಿಡುತ್ತಿದ್ದರು. ಪತ್ನಿ ತಿರುಗಿ ಮನೆಗೆ ಬಂದರೂ ಸುಂಕಾಪುರ ಆ ಜನಪದ ಕಲಾವಿದರೊಂದಿಗೆ ಚರ್ಚಿಸುತ್ತ ಅಲ್ಲಿಯೇ ಇರುತ್ತಿದ್ದರು. ಮನೆಗೆ ಬಂದ ಸುಂಕಾಪುರರನ್ನು ಹೆಂಡತಿ 'ಏನ್ರಿ, ಹಿಂಗ್ಯಾಕ ಮಾಡಿದ್ರಿ' ಎಂದರೆ– ನಾನೇನು ಮಾಡಿದೆ; ನಿನ್ನ ಜೊತೆ ನಾ ಯಾವಾಗ ಮಾರ್ಕೆಟ್ಟಿಗೆ ಬಂದಿದ್ದೆ ಎಂದುದುಂಟು. ಇಷ್ಟೊಂದು ಜನಪದಮಯವಾಗಿಬಿಟ್ಟಿದ್ದರು ಸುಂಕಾಪುರ.

ಜನಪದವನ್ನು ತುಂಬ ಆಳಕ್ಕಿಳಿದು ಅಭ್ಯಸಿಸಿದರು; ಹಳ್ಳಿ ಹಳ್ಳಿ ಸುತ್ತು ಸುಳಿದು ಸಂಗ್ರಹಿಸಿದರು. 'ಜೀವನಜೋಕಾಲಿ' – 'ಜಾನಪದ ಸಾಹಿತ್ಯ ದರ್ಶನ' ಹೆಸರಿನಲ್ಲಿ ಹತ್ತಾರು ಸಂಪುಟಗಳನ್ನು ಪ್ರಕಟಿಸಿದರು. ಪ್ರತಿ ವರುಷ ಕ.ವಿ.ವಿ. ಯಿಂದ 'ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ನಡೆಸುತ್ತ ಬಂದರು. (ಸೇವಾ ನಿವೃತ್ತಿ ಹೊಂದುವವರೆಗೆ). "ಜಾನಪದ ನನ್ನನ್ನು ತನ್ನೊಳಗೆ ಮಾಡಿಕೊಂಡಿತೆಂದೇ ಹೇಳಬೇಕು. ಇನ್ನೂ ಹೆಚ್ಚಿನ ಸೇವೆ ಮಾಡಬೇಕೆಂದಿದ್ದೇನೆ. ಭವಿಷ್ಯ ಯಾವಾಗಲೂ ಅನಿಶ್ಚಿತ" – ಈ ಮಾತನ್ನು ಸುಂಕಾಪುರ ಅವರು ಹೇಳಿದ್ದು 1982ರ ಸುಮಾರಿನಲ್ಲಿ.

ಅವರು ನಿಧನರಾದುದು 1992ರಲ್ಲಿ. ಕೊನೆಯ ಹತ್ತು ವರುಷಗಳಲ್ಲಿಯೂ ಕೆಲವಾರು ಮಹತ್ವದ ಜನಪದ ಕೆಲಸ ಕಾರ್ಯಗಳನ್ನು ಸುಂಕಾಪುರ ಅವರು ಮಾಡಿದ್ದು ಗಮನಾರ್ಹ.

3. ಜನಪದ ಸಾಹಿತ್ಯ ಮತ್ತು ರಂಗಭೂಮಿ ಕುರಿತ ಸುಂಕಾಪುರರ ಆಶಯ

ಡಾ. ಆರ್.ಸಿ. ಹಿರೇಮಠ ಅವರ ನೇತೃತ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಜಾನಪದ ಅಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಟ್ಟಿತು. ಈ ನಿಟ್ಟಿನಲ್ಲಿ ಒಂದು ಚೇತನಾಶಕ್ತಿಯಾಗಿ ದುಡಿದವರು ಡಾ.ಎಂ.ಎ.ಸ್. ಸುಂಕಾಪುರ ಅವರು. ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾಗಿ–ಪ್ರಾಚಾರ್ಯರಾಗಿ ಅವರು ನಿತ್ಯನಿರಂತರ ಜಾನಪದಕ್ಕಾಗಿ ಶ್ರಮಿಸಿದ್ದಾರೆ. ಆರ್.ಸಿ. ಅವರು ಹಾಕಿಕೊಟ್ಟ ಜನಪದ ಕೆಲಸವನ್ನು ಮುಂದುವರಿಸಿದ ಪ್ರಮುಖರವರು. ಸೇವಾನಿವೃತ್ತಿ ನಂತರವೂ ಯು.ಜಿ.ಸಿ. ಪ್ರಾಧ್ಯಾಪಕರಾಗಿ ಕನ್ನಡ ತೆಲುಗಿನಲ್ಲಿರುವ ಜನಪದ ರಂಗಭೂಮಿಯನ್ನು ಕುರಿತು ವಿಶೇಷ ಸಂಶೋಧನಾಧ್ಯಯನ ಕೈಗೊಂಡವರು. ಹಳ್ಳಿ ಹಳ್ಳಿ ಸುತ್ತಿ ಜನಪದರಿಗೆ ಜನಪದ ಸಾಹಿತ್ಯದ ಅರಿವು ಮೂಡಿಸಿದ್ದಾರೆ; ಅವರನ್ನು ಹಾಡಲು–ಕುಣಿಯಲು ಹುರಿದುಂಬಿಸಿದ್ದಾರೆ. ಕೆಲವರು ಕಲಾವಿದರಿಗೆ ಬಟ್ಟೆಬರೆ, ರೊಕ್ಕರುಪಾಯಿ ಕೂಡ ಧಾರಾಳವಾಗಿ ಕೊಟ್ಟಿದ್ದಾರೆ. ಜಾನಪದ ಕಲೆಯ ಪ್ರದರ್ಶನ ಮತ್ತು ಜಾನಪದ ಸಾಹಿತ್ಯದ ವಿಷಯದ ತಿಳಿವಳಿಕೆಗಾಗಿ ವರುಷಕ್ಕೊಮ್ಮೆ 'ಜಾನಪದ ಸಮ್ಮೇಳನ' ಏರ್ಪಡಿಸುತ್ತ ಬಂದಿದ್ದಾರೆ. ಅದರ ಅಂಗವಾಗಿ ಗೋಷ್ಠಿಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು 'ಜಾನಪದ ಸಾಹಿತ್ಯ ದರ್ಶನ' ಶೀರ್ಷಿಕೆಯ ಅಡಿಯಲ್ಲಿ ಸಂಪಾದಿಸಿ, ಜಾನಪದ ಸಂಶೋಧನ ಕ್ಷೇತ್ರವನ್ನು ವಿಸ್ತರಿಸಿದ್ದಾರೆ. ಜನಪದ ಸಾಹಿತ್ಯದ ಅಭ್ಯಾಸ ಅನಿವಾರ್ಯವಾದುದು ಏಕೆಂದು ಸುಂಕಾಪುರ ಸ್ಪಷ್ಟಪಡಿಸಿದ್ದು ಇಂದಿಗೂ ಮೌಲಿಕ ವಿಚಾರ : "ಈ ಸಾಹಿತ್ಯದ ಅಭ್ಯಾಸ ಮಾನವ ಜನಾಂಗದ ಮೂಲಭೂತವಾದ ಅಭ್ಯಾಸ. ಏಕೆಂದರೆ ಇಲ್ಲಿ ನುಡಿಯುವುದು, ಮಿಡಿಯುವುದು ಮೂಲ ಮಾನವನ ಆಲೋಚನೆ, ಅನಿಸಿಕೆಗಳು. ಬಾಹ್ಯ

ಸಂಸಾರದ ಯಾವ ಕ್ರತ್ರಿಮದ ಸೋಂಕೂ ಇಲ್ಲದೆ ನೈಜ ಮಾನವತ್ವ ಇಲ್ಲಿ ಮೆರೆಯುತ್ತದೆ. ಸಾಮಾನ್ಯರ ಬದುಕಿನ ಅಳಲನ್ನು ಅಂಥದರಲ್ಲಿಯೂ ಅವರು ಕಾಪಾಡಿಕೊಂಡು ಬಂದ ಹೃದಯದ ಶ್ರೀಮಂತಿಕೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಜನಪದ ಸಾಹಿತ್ಯದ ಅಭ್ಯಾಸ ಅನಿವಾರ್ಯ" –ಎಂದು ಅದರ ಮಹತಿಯನ್ನು ಎತ್ತಿ ಆಡಿದ್ದಾರೆ.

'ಪ್ರಪಂಚದಲ್ಲಿ ಶಿಷ್ಟ ಸಾಹಿತ್ಯಕ್ಕಿಂತಲೂ ಮೊದಲು ಮೂಡಿದುದು ಜನಪದ ಸಾಹಿತ್ಯ. ಸರಿಯಾಗಿ ವಿವೇಚಿಸಿದರೆ ಶಿಷ್ಟ ಸಾಹಿತ್ಯದ ಉಗಮ, ವಿಕಾಸ, ಬೆಳವಣಿಗೆಗೆ ಜನಪದ ಸಾಹಿತ್ಯ ಪ್ರೇರಕಶಕ್ತಿಯಾಗಿ ನಿಂತಿರುವುದು ಸ್ಪಷ್ಟವಾಗಿ ತೋರುವುದು. ಹೀಗಿದ್ದರೂ ಶಿಷ್ಟ ಕವಿಗಳು ಜನಪದ ಸಾಹಿತ್ಯವನ್ನು ಕಡೆಗಣಿಸಿ ನೋಡಿದುದು ದುರ್ದೈವ ಸಂಗತಿ. ಜನಪದ ಕವಿಗಳು ಸ್ವಾರ್ಥಸಾಧನೆಗಾಗಿ ಅನ್ಯರನ್ನು ಹೊಗಳಹೊರಟವರಲ್ಲ. ಅವರದು ನಿಷ್ಕಾಮ ಕರ್ಮ. ತಾವು ಕಂಡುದನ್ನು, ಕೇಳಿದುದನ್ನು ಅನುಭವಕ್ಕೆ ಬಂದ ನೋವು, ನಲಿವುಗಳನ್ನು ನೆನೆದು ಮನದುಂಬಿ ಹಾಡುತ್ತ ಬಂದಿದ್ದಾರೆ..... ಅದು ಜೀವನ ಸಾಹಿತ್ಯ. ಜೀವಂತ ಸಾಹಿತ್ಯ. ಜನಪದ ಸಾಹಿತ್ಯದ ಝುರಿ ಎಂದೂ ಬತ್ತಿಲ್ಲ. ಮುಂದೆಯೂ ಬತ್ತುವುದಿಲ್ಲ; ಕಾಲಮಾನಕ್ಕನುಗುಣವಾಗಿ ಅದಕ್ಕೆ ಏರಿಳಿತ ಬರಬಹುದು ಅಷ್ಟೇ. ಶ್ರೀ ಸಾಮಾನ್ಯರು ಇರುವವರೆಗೆ ಅದಕ್ಕೆ ಬದುಕುವ ದಾರಿ ಇದ್ದೇ ಇದೆ. ಎಂಬ ಆಶಯ/ಅಭಿಪ್ರಾಯ ಹೊಂದಿದ ಸುಂಕಾಪುರ ಅವರು ಜನಪದರಲ್ಲಿ ಹುದುಗಿದ್ದ ಅಸಂಖ್ಯಾತ ಹಾಡುಗಳಲ್ಲಿ–ಕಲೆಗಳಲ್ಲಿ ಕೆಲವಾರು ಹಾಡುಗಳನ್ನು ರಂಗಕಲೆಗಳನ್ನು ಸಂಗ್ರಹಿಸಿ 'ಜೀವನ ಜೋಕಾಲಿ', 'ಜಾನಪದ ಸಾಹಿತ್ಯ ದರ್ಶನ' ಮಾಲಿಕೆಯಲ್ಲಿ ಪ್ರಕಟಿಸಿ, ತಮಗಿರುವ ಜನಪದ ಸಾಹಿತ್ಯದ ಸಹಜಾಸಕ್ತಿಯನ್ನು ತೋರಿದ್ದಾರೆ, ಮೆರೆದಿದ್ದಾರೆ.

ಜನಪದ ಸಾಹಿತ್ಯ ಮತ್ತು ಕನ್ನಡ ಜನಪದ ರಂಗಭೂಮಿಯ ವಿಚಾರವಾಗಿ ತಮ್ಮದೇ ಖಚಿತ ನಿಲುವು ಅವರದಿತ್ತು. "ಜನಪದ ಸಾಹಿತ್ಯಕ್ಷೇತ್ರದಲ್ಲಿ ಇದೀಗ ಅರುಣೋದಯವಾಗತೊಡಗಿದೆ. ಮಬ್ಬು

ಹರಿದು ಬೆಳಕು ಮೂಡುತ್ತಲಿದೆ. ಜನಪದ ಕಲಾವಿದರು, ಊಳಿಗದವರು ರಸಿಕರು ಕಣ್ಣುಜ್ಜಿಕೊಂಡು ಮೇಲೇಳುತ್ತಿದ್ದಾರೆ. ತಾವು ಮಾಡಬೇಕಾದ ಕಾರ್ಯವನ್ನು ಹುಡುಕಿಕೊಂಡು ಕಾರ್‍ಯನಿರತರಾಗಲು ಯತ್ನಿಸುತ್ತಿದ್ದಾರೆ. ಜಾನಪದ ಸಂಗ್ರಹ, ಸಂಪಾದನ–ಅಧ್ಯಯನ ನಡೆದಿದೆ. ಹಲವಾರು ಸಂಗ್ರಹ, ಒಂದೆರಡು ವಿಮರ್ಶಾಗ್ರಂಥ, ಕೆಲವು ಪುಡಿ ಲೇಖನ ಹೊರಬಂದಿವೆ. ಇಷ್ಟರಿಂದಲೇ ಜನಪದ ಕಾರ್‍ಯ ಮುಗಿಯದು. ಜಾನಪದ ಸಂಸ್ಕೃತಿಯ ತಳಬೇರು ಮೊದಲುಮಾಡಿ ಅದರ ಫಲದವರೆಗೆ ನಾವು ಅಭ್ಯಾಸ ಮಾಡಬೇಕಾಗಿದೆ. ನೂರೆಂಟು ಕಡೆಗೆ ಮುಖಚಾಚಿ ಸೂಕ್ಷ್ಮದೃಷ್ಟಿಯಿಂದ ವೀಕ್ಷಿಸಿ ವಿಚಾರಮಾಡಬೇಕಾಗಿದೆ. ಮೂಲಮಾನವನ ಕಾಲದಿಂದ ಹಿಡಿದು ಇಲ್ಲಿಯವರೆಗೆ ಆದ ಮಾನವನ ಆಚಾರ ವಿಚಾರಗಳ, ಗೆಯ್ಮೆಯ ಏಳುಬೀಳುಗಳನ್ನು ಅಧ್ಯಯನ ಮಾಡಬೇಕಾದುದು ಅಗತ್ಯ. ಅದಕ್ಕಾಗಿ ಸಮಾಜ ಶಾಸ್ತ್ರ, ಮಾನವಿಕ ಶಾಸ್ತ್ರ, ಮನಃಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಭಾಷಾಶಾಸ್ತ್ರಗಳ ಅಧ್ಯಯನ ಅವಶ್ಯಕ. ನಾವು ಅಭ್ಯಾಸ ಮಾಡಲು ಸಹಾಯಕವಾಗುವಂತೆ ರಂಗದರ್ಶನ, ಕಲಾಪ್ರದರ್ಶನ ಬೇಕೇಬೇಕು" ಎಂದು ಸುಂಕಾಪುರ ಅವರು ಎಪ್ಪತ್ತರ ದಶಕದಲ್ಲಿ ಮಾತನಾಡಿದುದರಲ್ಲಿ ಅವರ ದೂರಾಲೋಚನೆಯನ್ನು ಗುರುತಿಸಬಹುದು.

ಅಂತೆಯೇ ಅವರ ಜನಪದ ರಂಗಭೂಮಿಯ ವಿಚಾರ ಇಂತಿದೆ: ಕನ್ನಡ ಜಾನಪದ ರಂಗಭೂಮಿ ಕಾಲಾನುಕಾಲಕ್ಕೆ ಹೊಸ ಹೊಸ ಪ್ರಯೋಗಗಳನ್ನು ಹುಡುಕುತ್ತಲೇ ಜನತೆಯ ಅಭಿರುಚಿಗೆ ಅನುಗುಣವಾಗಿ ವರ್ತಿಸುತ್ತ ಬಂದುದನ್ನು ಅರಿಯುತ್ತೇವೆ. ಅಭಿಜಾತ ರಂಗಭೂಮಿ ಸಾಧಿಸದೇ ಇದ್ದುದನ್ನು ಜಾನಪದ ರಂಗಭೂಮಿ ಸಾಧಿಸಿದೆಯೆಂದು ಧೈರ್‍ಯವಾಗಿ ಹೇಳಬಹುದು. ಜಾಣರನ್ನು ಜಾಣರನ್ನಾಗಿ ಮಾಡುವುದು ದೊಡ್ಡದಲ್ಲ. ಏನನ್ನೂ 'ಅರಿಯದ ಹಳ್ಳಿಯ ಜನಕ್ಕೆ ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ ಕಲ್ಪನೆಯನ್ನು ಮಾಡಿಕೊಡುವಲ್ಲಿ ಅದು ಮಾಡಿದ ಸೇವೆ ಅಗಾಧವಾದುದು. ರಂಜನೆ ಮಾಡುತ್ತಲೇ ಸಾಮಾನ್ಯ ಜನತೆಗೆ ಜ್ಞಾನ

ನೀಡುವಲ್ಲಿ ಜಾನಪದ ರಂಗಭೂಮಿ ಮಾಡಿದ ಸೇವೆಯನ್ನು ವರ್ಣಿಸಿ ಹೇಳುವುದು ಅಸಾಧ್ಯವೇ ಸರಿ. ಇಂತಹ ರಂಗಭೂಮಿ ಇತ್ತೀಚೆಗೆ ಕಣ್ಮರೆಯಾಗುತ್ತಿರುವುದು ಶೋಚನೀಯವಾಗಿದೆ. ಅಂದು ಒಂದು ದೊಡ್ಡ ಕಲೆಯಾಗಿ ಮೆರೆದುದು ಇಂದು ಕೈಬಿಡುತ್ತಲಿದೆ. ಉಳಿಸಿಕೊಳ್ಳುವುದಕ್ಕೆ ಜನತೆಯೇ ಮುಂದೆ ಬರಬೇಕು. ಜಾನಪದ ಕಲಾವಿದರಿಗೆ ಮರ್ಯಾದೆ ಸಲ್ಲಬೇಕು. ಅವರ ಜೀವನೋಪಾಯಕ್ಕೆ ತಕ್ಕವ್ಯವಸ್ಥೆಯಾಗಬೇಕು. ಎಲ್ಲದೂ ಆಗಲೇಬೇಕು. ಆದರೆ ಅದನ್ನು ಒದಗಿಸುವವರಾರು? ಜಾನಪದ ರಂಗಭೂಮಿಯ ಹಿತಚಿಂತಕರು ಇಂದು ಸುದೀರ್ಘವಾಗಿ ಆಲೋಚಿಸಬೇಕಾದುದು ಅಗತ್ಯ" ವೆಂದು ಹೇಳಿದುದು (1974ರ ಸುಮಾರಿನಲ್ಲಿ) ಇಂದಿಗೂ ಪ್ರಸ್ತುತವಾದುದು.

4. 'ಜೀವನ ಜೋಕಾಲಿ....'

ಸುಂಕಾಪುರ ಅವರು ಉತ್ತರ ಕರ್ನಾಟಕದ ಜಾನಪದವನ್ನು ಕುರಿತು ಅಧಿಕೃತವಾಗಿ ಮಾತನಾಡಬಲ್ಲ ಬೆರಳೆಣಿಕೆಯ ವಿದ್ವಾಂಸರಲ್ಲೊರ್ವರು. ಆರ್.ಸಿ. ಹಿರೇಮಠ ಅವರು ತೋರಿದ ಬೆಳಕಿನಲ್ಲಿ ಸಾಗಿ ಉ.ಕ. ಜಾನಪದವನ್ನು ವಿಶೇಷವಾಗಿ ಅಧ್ಯಯನಿಸಿ, ವಿಶಿಷ್ಟ ಕೃಪೆಗೈದರು. ಇವರು ಜನಪದ ಗೀತೆ, ಬಯಲಾಟ, ಕುಣಿತ, ಕತೆಗಳನ್ನು ಮೈಗಂಟಿಸಿಕೊಂಡರು; ಅವನ್ನು ನೋಡುತ್ತ ಕೇಳುತ್ತ ಮೈಮರೆಯ ತೊಡಗಿದರು. ಈ ಕಲೆಗಳ ಕವಿಗಳನ್ನು ಮತ್ತು ವಕ್ತಾರರನ್ನು ಕಂಡು ಬೆರಗಾದರು. ಗುಡಿಸಲಿನಲ್ಲಿ ವಾಸಮಾಡುವ ಆ ಬಡಜೀವಿಗಳಲ್ಲಿ ಮಡಗಿದ ಶ್ರೀಮಂತವಾದ ಮತ್ತು ಜೀವಂತವಾದ ಸಾಹಿತ್ಯದಿಂದ ಸಂತೋಷಪಟ್ಟರು. ಮಾತ್ರವಲ್ಲ ಬಹಳ ಮುಖ್ಯವಾಗಿ ಅವರು ಜನಪದ ಜೀವನವನ್ನು ಚೆನ್ನಾಗಿ ಅರ್ಥಮಾಡಿಕೊಂಡರು. ಅಂತೆಯೇ ಹೀಗೆ ಹೇಳಿದ್ದಾರೆ : "ಜೀವನವೊಂದು ಜೋಕಾಲಿಯಂತೆ, ಹಿಂದುಮುಂದು ಹರಿದಾಡಿ ಮೂಲಮೆಟ್ಟಿಗೆ ಬಂದು ನಿಲ್ಲುತ್ತದೆ. ಜೀವಂತ ಜೀವನದ ಹಣೆಯ ಬರೆಹವೇ ಹೀಗೆ. ಸಂಪ್ರದಾಯ ಕ್ರಾಂತಿಗಳ ಮಧ್ಯದಲ್ಲಿ ಜೀವನ ನೆಮ್ಮದಿ

ಹೊಂದಲು ಆಶಿಸುತ್ತದೆ. ಬಹುಕಾಲದ ಸಂಪ್ರದಾಯಕ್ಕೆ ಬೇಸತ್ತಾಗ ಮಾನವನು ಕ್ರಾಂತಿಯೆಡೆಗೆ ತೂಗುತ್ತಾನೆ. ಕ್ರಾಂತಿಸಾಕೆನಿಸಿದಾಗ ಪುನಃ ಸಂಪ್ರದಾಯಕ್ಕೆ ಜೀಕುತ್ತಾನೆ. ಹೀಗಾಗಿ ಮಾನವನ ಜೀವನವು ಜೋಕಾಲಿಯಂತೆ ಹಿಂದಕ್ಕೂ.ಮುಂದಕ್ಕೂ ಜೋಲಿ ಹೊಡೆಯುತ್ತಲೇ ಇದೆ. ಅವರ ಆಚಾರ–ವಿಚಾರ, ರೀತಿನೀತಿ, ಪ್ರೇಮ–ಕಾಮ, ಅನಿಸು–ತಿನಿಸು, ಆಟ–ಪಾಠ, ಎಲ್ಲದರಲ್ಲಿಯೂ ಜೋಕಾಲಿಯ ಸ್ವಭಾವ ಮೈವೆತ್ತು ನಿಂತಿದೆ". ಹೀಗೆ ಹೇಳಿ 'ಜೀವನ ಜೋಕಾಲಿ' ಯ ಹೆಸರಲ್ಲಿ ಒಂಬತ್ತು ಕೃತಿಗಳನ್ನು (ಜನಪದ ಗೀತೆಗಳ ಸಂಗ್ರಹಗಳು), 'ಕನ್ನಡ ಬಯಲಾಟ' ದ ಹೆಸರಿನಲ್ಲಿ ಐದು ಬಯಲಾಟಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಅವು....

ಜೀವನ ಜೋಕಾಲಿ ಭಾಗ : 1 – ಚೌಪದನಗಳು : 1971
ಜೀವನ ಜೋಕಾಲಿ ಭಾಗ : 2 – ಸರಸವಿರಸ : 1971
ಜೀವನ ಜೋಕಾಲಿ ಭಾಗ : 3 – ಗರತಿಯರ ಗರಿಮೆ : 1973
ಜೀವನ ಜೋಕಾಲಿ ಭಾಗ : 4 – ಹೋಳಿ ಹಾಡು : 1974
ಜೀವನ ಜೋಕಾಲಿ ಭಾಗ : 5 – ದುಂದುಮೆ ಪದ : 1975
ಜೀವನ ಜೋಕಾಲಿ ಭಾಗ : 6 – ಡೊಳ್ಳಿನ ಹಾಡು : 1975
ಜೀವನ ಜೋಕಾಲಿ ಭಾಗ : 7 – ಗಂಗಿಗೌರೀ ಸಂವಾದ : 1976
ಜೀವನ ಜೋಕಾಲಿ ಭಾಗ : 8 – ಕೋಲುಪದ : 1976
ಜೀವನ ಜೋಕಾಲಿ ಭಾಗ : 9 – ಜೋಗತಿ ಹಾಡು : 1977.

ಕನ್ನಡ ಬಯಲಾಟ : ಶ್ರೀ ಕೃಷ್ಣ ಪಾರಿಜಾತ – 1972
ಕನ್ನಡ ಬಯಲಾಟ : ಅಲ್ಲಮ ಪ್ರಭು – 1973
ಕನ್ನಡ ಬಯಲಾಟ : ಪ್ರಮೀಳೆ – 1976
ಕನ್ನಡ ಬಯಲಾಟ : ತಿರುನೀಲಕಂಠ – 1977
ಕನ್ನಡ ಬಯಲಾಟ : ಶ್ರೀ ಕೃಷ್ಣ ಸಂಧಾನ (ಯಕ್ಷಗಾನ) – 1978

ಇವಲ್ಲದೆ, ನೂರಾರು ಜಾನಪದಕ್ಕೆ ಸಂಬಂಧಿಸಿದ ವೈಚಾರಿಕ-ವಿಮರ್ಶಾತ್ಮಕ ಮತ್ತು ಸಂಶೋಧನಾತ್ಮಕ ಲೇಖನ-ಪ್ರಬಂಧಗಳನ್ನು ಸುಂಕಾಪುರ ಅವರು ಬರೆದಿದ್ದಾರೆ. 'ಜೀವನ ಜೋಕಾಲಿ' ಮಾಲೆಯಲ್ಲಿಯ ಮೇಲಿನ ಎಲ್ಲ ಸಂಕಲನಗಳನ್ನು ಕರ್ನಾಟಕ ವಿಶ್ವವಿದ್ಯಾಲಯವೇ ಪ್ರಕಟಿಸಿದೆ.

ಚೌಪದಿಗಳು :

ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಗಾಂವಟಿ ಶಾಲೆಗಳಲ್ಲಿ ಮಕ್ಕಳಿಗೆ ಪುಕ್ಕಟೆಯಾಗಿ ಐಯ್ಯನೋರೆ, ಶಿಕ್ಷಕರಾಗಿ ಪಾಠ ಹೇಳುತ್ತಿದ್ದರು. ಪ್ರತಿಯಾಗಿ ಮಕ್ಕಳು ಪ್ರತಿವರ್ಷ ಮಾನೌಮಿ ಕಾಲದಲ್ಲಿ ಪದಗಳನ್ನು ಹಾಡುತ್ತ ಊರಲ್ಲಿ ಕಾಣಿಕೆ ಎತ್ತಿ ತಮ್ಮ ಗುರುಗಳಿಗೆ ಕೊಡುವ ಪರಿಪಾಠವಿತ್ತು. ಈ ಸಂದರ್ಭದಲ್ಲಿ ಹಾಡುವ ಹಾಡುಗಳಿಗೆ 'ಮಾನೋಮಿ ಪದ' ಗಳೆನ್ನುವರು. ಇವುಗಳನ್ನೇ ಸುಂಕಾಪುರ ಅವರು 'ಚೌಪದನ' ವೆಂದು ಕರೆದಿದ್ದಾರೆ. ಇವು ನಾಲ್ಕು ಸಾಲಿನ ಪದ್ಯಗಳು. ಚೌಪದಿಯ ಧಾಟಿಯಲ್ಲಿ ಅವು ಮೂಡಿಬಂದಿರುವುದರಿಂದ 'ಚೌಪದನ' ಎನಿಸಿಕೊಂಡಿವೆ. ಮಾರ್ಗ-ದೇಸೀಗಳ ಮಧ್ಯದಲ್ಲಿ ಬೆಳೆದುಬಂದ ಇವನ್ನು ಹಾಡುಗಬ್ಬ, ನೀಳ್ಗವನ, ಕಥನ ಕವನ ಎಂದೂ ಕರೆಯುವರು. ಇವು ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಸಾಹಿತ್ಯಕ ದೃಷ್ಟಿಯಿಂದ ಅತಿ ಮಹತ್ವವೆನಿಸಿದ ಚೌಪದನಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿದ್ದಾರೆ. ಜನಪದ ಸಾಹಿತ್ಯದಲ್ಲಿ ಕಥನಕವನಗಳಿಗೆ ವಿಶಿಷ್ಟ ಸ್ಥಾನವಿದೆ. ಪುರಾಣ ಪ್ರಸಂಗಗಳನ್ನು ಆದರ್ಶವ್ಯಕ್ತಿಗಳನ್ನು, ರಾಜರಾಣಿಯರನ್ನು ಸಾದ್ಯಂತವಾಗಿ ಹೇಳುವ ಕಥನಕವನಗಳು ನಮ್ಮಲ್ಲಿ ಸಾಕಷ್ಟಿವೆ. ನೇರವಾಗಿ ಕಥೆ ಹೇಳುತ್ತ ಹೋಗುವುದೇ ಇವುಗಳನ್ನು ರಚಿಸಿದ ಕವಿಗಳ ಗುರಿಯಾಗಿದೆ. ಕಥಾವಸ್ತುವಿನ ದೃಷ್ಟಿಯಿಂದ ಈ ಸಾಹಿತ್ಯ ಪ್ರಕಾರವನ್ನು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಎಂದು ವಿಗಡಿಸಬಹುದು. ಹಾಗೆ ಮಾಡಿದಲ್ಲಿ ಈ ಸಂಗ್ರಹದಲ್ಲಿಯ ಗಣೇಶ, ವೀರಭದ್ರ, ಗಂಗಿ-ಗೌರಿ, ಕಂಸವಧ

ಚೌಪದನಗಳನ್ನು ಪೌರಾಣಿಕವೆಂದೂ ಗುರುಭಕ್ತಾಂಡಾರಿ, ಚಿತ್ರಶೇಖರ, ಸೋಮಶೇಖರ, ವೀರಸಂಗಯ್ಯ ಚೌಪದನಗಳನ್ನು ಐತಿಹಾಸಿಕವೆಂದೂ ಮಾನೋಮಿ ಬೆಡಗಿನ ಚೌಪದನಗಳನ್ನು ಸಾಮಾಜಿಕ ಚೌಪದನಗಳೆಂದೂ ಹೆಸರಿಸಬಹುದಾಗಿದೆ. ಅದ್ವೈತ ತತ್ವ ಚೌಪದನ ಈ ಯಾವ ವಿಭಾಗಕ್ಕೆ ಸೇರದೆ ಸ್ವತಂತ್ರವಾಗಿ ತತ್ವಬೋಧೆ ಮಾಡುವ ಕೃತಿಯಾಗಿದೆ. ಈ ವಿಭಾಗ ಕ್ರಮದಲ್ಲಿಯೇ ಚೌಪದನಗಳನ್ನು ಸುಂಕಾಪುರ ಸಂಕಲಿಸಿದ್ದಾರೆ. ಇಲ್ಲಿ ಇವರ ಸೂಕ್ಷ್ಮಾವಲೋಕನವನ್ನು ಗುರುತಿಸಬಹುದಾಗಿದೆ.

ಪುರಾಣ ಕಥೆಯೇ ಇರಲಿ, ಐತಿಹಾಸಿಕವೇ ಆಗಿರಲಿ; ಅಲ್ಲಿ ಬರುವ ವ್ಯಕ್ತಿಗಳಿಗೆ ಮಾನವತೆ ಆರೋಪಿತವಾಗಿರುವುದರಿಂದ ದೇವರೂ ದೇವಾಂಶಸಂಭೂತರೂ ಮಾನವರಾಗಿಯೇ ತೋರುತ್ತಾರೆ. ಅಲ್ಲಿ ನಾವು ಕಾಣುವುದು ಮಾನವೀಯ ಭಾವನೆಗಳನ್ನು, ಸಾಮಾನ್ಯರ ರಾಗದ್ವೇಷಗಳ ನಿರೂಪಣೆಯನ್ನು. ಆದ್ದರಿಂದಲೇ ನಮ್ಮನ್ನು ಬಿಟ್ಟು ದೇವರಿಲ್ಲ ಎನ್ನುವ ಮಾನವ ರೀತಿ ಈ ಕವನಗಳಲ್ಲಿ ಕಾಣುತ್ತದೆ.

"ಈ ಚೌಪದನಗಳಲ್ಲಿ ಭಾವದ ಬಂಧುರತೆ ಇದೆ, ಹೃದ್ಯವಾದ ಗುಣವಿಶೇಷ ಇದೆ, ನಾನಾರಸಗಳ ಪ್ರವಾಹ ಇದೆ. ಚೌಪದನ ವಸ್ತುವಿಗೆ ಹೊಂದಿಕೆಯಾದ ಶೈಲಿ ಇದೆ. ಸ್ವಭಾವೋಕ್ತಿಯ ಸರಸಸಜ್ಜನಿಕೆ ಇದೆ" ಎಂದು ಚೌಪದನಗಳ ಸಾಹಿತ್ಯದ ಮೌಲ್ಯವಿಮರ್ಶೆಯನ್ನು ಮಾಡಿದ ಸುಂಕಾಪುರ ಅವರು ಒಳ್ಳೇ ಜನಪದ ವಿಮರ್ಶಕರಾಗಿ, ಚಿಂತಕರಾಗಿ ಕಂಡುಬರುತ್ತಾರೆ. ಕೊನೆಯಲ್ಲಿ 'ಶಬ್ದಾರ್ಥಕೋಶ' ಕೂಡ ನೀಡಿ, ಓದುಗರಿಗೆ ಅನುಕೂಲಿಸಿದ್ದಾರೆ.

ಸುಂಕಾಪುರ ಅವರು ಇಲ್ಲಿ ತುಂಬ ಜಾಣ್ಮೆಯಿಂದ ಪರಿಷ್ಕರಣ ಕಾರ್ಯ ಮಾಡಿದ್ದಾರೆ. 'ಜೀವನಜೀಕಾಲಿ' ಶೀರ್ಷಿಕೆಯ ಮೊತ್ತಮೊದಲ ಹೊತ್ತಿಗೆಯಿದು. 'ಜನಪದ ಕಲೆ–ತಿರಸ್ಕಾರ–ಪುರಸ್ಕಾರ–ಹಾಡು–ಪಾಡು,

ಜೀವನ ಜೋಕಾಲಿ, ಚೌಪದನಗಳು, ವೈವಿಧ್ಯ–ವೈಶಿಷ್ಟ್ಯ–ಮಾರ್ಗ–ದೇಶಿ–ವರ್ಣನೆಗಳು, ಪಾತ್ರ ಸೃಷ್ಟಿ–ರಸನಿರೂಪಣೆ–ಶೈಲಿ; ಕೊನೆಗೆ; ಈ ಒಳನೋಟಗಳುಳ್ಳ ಸೂಕ್ತವಾದ ದೀರ್ಘಪ್ರಸ್ತಾವನೆಯನ್ನು ಬರೆದಿದ್ದಾರೆ. 'ಜೀವನ ಜೋಕಾಲಿ' ಹೆಸರಿನ ಔಚಿತ್ಯವನ್ನು ವಿವರಿಸುವ ಸುಂಕಾಪುರ ಅವರಿಗೆ ವಿಷಯದ ಅರಿವು ಸುಸ್ಪಷ್ಟವಾದುದು ತಿಳಿದುಬರುತ್ತದೆ.

ಸರಸವಿರಸ :

ಕನ್ಯಾನ್ವೇಷಣೆ, ಮದುವೆ, ಬಸಿರು, ತೊಟ್ಟಿಲ ಕಾರ್ಯ ಕೊನೆಗೆ ಸಾವು – ಈವರೆಗಿನ ಹೆಣ್ಣುಮಕ್ಕಳು ಹಾಡುವ ಹಾಡುಗಳನ್ನು 'ಸರಸ–ವಿರಸ' ಹೆಸರಿನ 'ಜೀವನ ಜೋಕಾಲಿ' – ಭಾಗ 2 ರಲ್ಲಿ ನೋಡುತ್ತೇವೆ. ಇದಕ್ಕೆ "ಮಾನವ ಜೀವನ–ಜನಪದ ಜೀವನ–ಮುಂಜೋಲಿ–ಆಸರಬೇಸರ–ಹಿಂಜೋಲಿ–ಜೀಕಮೂಕ ಇತ್ಯಾದಿ ಒಳನೋಟಗಳ ಮೂಲಕ ಹೃದ್ಯವಾದ ಮತ್ತು ದೀರ್ಘವಾದ ಮೌಲಿಕ ಪ್ರಸ್ತಾವನೆಯನ್ನು ಬರೆದಿದ್ದಾರೆ. ಅದನ್ನು ಓದುವುದೇ ಒಂದು ಸಂತಸದ ವಿಷಯ. ಅಷ್ಟೇ ಅಲ್ಲ, ಸುಂಕಾಪುರ ಅವರಿಗೆ ಜಾನಪದ ಸಂಸ್ಕೃತಿಯ ಬಗೆಗೆ ಕ್ಲಾರಿಟಿ ಇರುವುದನ್ನು ಕಂಡು ಇನ್ನೂ ಸಂತಸವೆನಿಸುತ್ತದೆ. ಮದುವೆಯಿಂದ ಮಸಣದವರೆಗೆ ದಾಂಪತ್ಯ ಜೀವನದಲ್ಲಿ ಕಾಣುವ 'ಸರಸವಿರಸ' ವನ್ನು ಚಿತ್ರಿಸುವ ಇಲ್ಲಿಯ ಹಾಡುಗಳು ಉತ್ತರ ಕರ್ನಾಟಕದಲ್ಲಿ ತುಂಬ ಜನಪ್ರಿಯವಾದಂಥವು. ಅಂಥವುಗಳನ್ನು ಮಾತ್ರ ಸಂಕಲಿಸಿದ ಸಂಪಾದಕರ ಶ್ರಮ ಸಾರ್ಥಕವಾಗಿದೆ.

ಗರತಿಯ ಗರಿಮೆ :

ಗರತಿಯರ 'ಹಿರಿಮೆ–ಗರಿಮೆ' ಗಳನ್ನು ಬಿತ್ತಿರಿಸುವ ಹಾಡುಗಳನ್ನು 'ಗರತಿಯರ ಗರಿಮೆ' ಭಾಗದಲ್ಲಿ ಕಾಣಬಹುದು. ಈ ಮೂರನೆಯ ಭಾಗದ ಸಂಪಾದನ ಕೃತಿಗೂ ಸಂಪಾದಕರು ತುಂಬ ದೀರ್ಘವಾದ ಅರ್ಥಪೂರ್ಣ ಪ್ರಸ್ತಾವನೆಯನ್ನು ಬರೆದಿದ್ದಾರೆ.

ಹೋಳಿ ಹಾಡು :

'ಹೋಳಿ' ಕಾಮನನ್ನು ಸುಟ್ಟುಹಾಕುವ ಸಾಂಕೇತಿಕ ಹಬ್ಬ. ಪ್ರತಿಯೊಬ್ಬರೂ ತಮ್ಮಲ್ಲಿರುವ ಕಾಮುವನ್ನು ಸುಟ್ಟುಹಾಕುವುದರ ಸಂಕೇತವಿದು. ಆದರೆ ಇಲ್ಲಿ ಹೀಗಾದರೆ, ಕೇವಲ ಕುಳ್ಳು ಕಟ್ಟಿಗೆ ಸುಟ್ಟು ಹಾಕಲಾಗುವುದು. ಅದನ್ನು ಜನಪದ ಕವಿ ಹೀಗೆ ವಿಡಂಬಿಸಿದ್ದಾನೆ:

'ಕಾಮಣ್ಣ ಸುಡಲಿಲ್ಲ ಕುರುಳ್ಮಣ್ಣ ಸುಟ್ಟಿ
ಕಾಮಣ್ಣ ಬಿಡಲಿಲ್ಲ ನೀಕಣಗೆಟ್ಟಿ
ಕಾಮ ಮಾಡಿದ ಲೋಕಕ ಮೂರಾ ಬಟ್ಟಿ
ಕಾಮಣ್ಣ ಗೆಲಿದರೆ ಬಲುಗಟ್ಟಿ'.

ಇಂಥ ಹೋಳಿ ಸಂಪ್ರದಾಯದ ಹಾಡುಗಳ ಸಂಗ್ರಹ ಪ್ರಸ್ತುತ 'ಹೋಳಿಹಾಡು'. ಕಾಮ–ಪ್ರೇಮ; ಕಾಮಕಲ್ಪನೆ, ದಾಕ್ಷಾಯಣಿ; ಪಾರ್ವತಿ–ಕಾಮದಹನ; ಹೋಳಿಹಬ್ಬ; ಹೋಳಿಯ ಆಚರಣ; ಶೃಂಗಾರ ಸಾಹಿತ್ಯ; ಕುಂದಗೋಳ ಬಸಲಿಂಗ; ತುರುವಿಗಿರೀಶನ ಶಿಷ್ಯ–ಮರುಳ ಸಿದ್ದನ ಬಾಲಕ; ಗುರುವರ ಸಿದ್ಧಸೇವಕ; ಹೋಳಿಯ ಉದ್ದೇಶ; ಹಾಡಿನ ದರುವು; ಹಾಡಿನ ದರತಿ; ಇತ್ಯಾದಿ ಅಂಶಗಳನ್ನೊಳಗೊಂಡ ಅಭ್ಯಾಸಪೂರ್ಣ ಪ್ರಸ್ತಾವನೆಯನ್ನು ಸಂಪಾದಕರು ಬರೆದುದು ತುಂಬ ಉಪಯುಕ್ತವಾಗಿದೆ. ಹೋಳಿ ಬಗೆಗಿನ ಸಮಗ್ರ ಮಾಹಿತಿ ಇಲ್ಲಿ ದೊರಕುತ್ತದೆ. ಜಾನಪದದ ಹುಚ್ಚು ಹಿಡಿಸಿಕೊಂಡಿದ್ದ ಸುಂಕಾಪುರ ಅವರು ಸಂಪಾದನಾ ಶಾಸ್ತ್ರದ ನೆಲೆಯಲ್ಲಿಯೇ ಇಲ್ಲಿ 'ಹೋಳಿ ಹಾಡು' ಗಳನ್ನು ಸಂಗ್ರಹಿಸಿ, ಸಂಶೋಧಿಸಿ ಪ್ರಕಟಿಸಿದ್ದಾರೆ. ಒಳ್ಳೇ ಕಾರ್ಯಕ್ಕೆ ಹುಚ್ಚು ಹಿಡಿಸಿಕೊಂಡರೆ ತಪ್ಪಲ್ಲವಲ್ಲ! ಜನಪದ ಸಾಹಿತ್ಯವನ್ನು ಪ್ರಕಾಶನಕ್ಕೆ ತರುವುದು ಸುಲಭದ ಕಾರ್ಯವಲ್ಲ! ಅಂಥ ಕಷ್ಟದ ಕಾರ್ಯಕ್ಕೆ ಕೈಹಾಕಿ ಸುಂಕಾಪುರ ಯಶಸ್ವಿಯಾಗಿದ್ದಾರೆ. ಈ ಸಂಗ್ರಹದಲ್ಲಿ ಏಳು ಹಾಡುಗಳನ್ನು ತುಂಬ ಪ್ರಯಾಸದಿಂದ ಸಂಪಾದಿಸಿದ್ದಾರೆ. ಇವು ಒಟ್ಟು ನಾಲ್ಕು ಜನ ಕವಿಗಳು ಬರೆದ ಹಾಡುಗಳು.

ಇವು ತುಂಬ ಮಹತ್ವದವುವಾದ್ದರಿಂದ ಅವನ್ನು ಉಲ್ಲೇಖಿಸಲಾಗಿದೆ:

ಕುಂದಗೋಳ ಬಸವಲಿಂಗ: ಕೃಷ್ಣಗೊಲ್ಲತಿ, ವೀರ ಅಭಿಮನ್ಯು, ಕೃಷ್ಣಾರ್ಜುನನ ಕಾಳಗ.

ತುರವಿ ಗಿರೀಶನ ಶಿಷ್ಯ : ಮಲುಹಣ.

ಉಜ್ಜಯಿನಿ ಮರುಳ ಸಿದ್ಧನ ಬಾಲಕ : ಕಾಮಿನೀ ಶೃಂಗಾರ, ಬಾಣಾಸುರ.

ಗೋಕಾವಿ ಸಿದ್ಧಸೇವಕ : ಧೀರ ಕುಮಾರರಾಮ

ಇಲ್ಲಿ ಸಂಪಾದಕರು ಜನಪದ ಕವಿಗಳ ವಿಷಯವಾಗಿಯೂ ಚಾರಿತ್ರಿಕ ಮಾಹಿತಿ ಸಂಗ್ರಹಿಸಿದ್ದು ಗಮನಾರ್ಹ.

ದುಂದುಮೆ ಪದ :

'ದುಂದುಮೆ' ಪದಗಳೂ 'ಹೋಳಿ' ಸಂಪ್ರದಾಯದ ಹಾಡುಗಳೆನ್ನುತ್ತಾರೆ. ಸುಂಕಾಪುರ ಅವರು "ಹೋಳಿ ಹಾಡು ಮತ್ತು ದುಂದುಮೆ ಪದ ಹೋಲಿ ಸಾಹಿತ್ಯದ ಎರಡು ಪ್ರಮುಖ ಅಂಶಗಳಾದರೂ ಅವೆರಡು ಅವಳೀ ಮಕ್ಕಳು ಇದ್ದಂತೆ. ಹೊರನೋಟಕ್ಕೆ ಅವೆರಡೂ ಒಂದೇ ಬಗೆಯಾಗಿ ಕಂಡರೂ ಅವುಗಳಲ್ಲಿ ಹುದುಗಿದ ಒಳದನಿ ಅದನ್ನು ಬೇರ್ಪಡಿಸಿ ಇಡುತ್ತದೆ. ಅವುಗಳ ಗತಿ ಭಿನ್ನಭಿನ್ನವಾಗುತ್ತದೆ. ಹಾಡಿಸಿ ನೋಡಿದಾಗ ಅವುಗಳ ಒಟ್ಟು ಒಳಗುಟ್ಟು ತಿಳಿಯಬಲ್ಲುದು. ಹೋಳಿಯ ಹಾಡು ರಗಳೆಯಂತೆ ಒಂದೇ ಸವನೆ ಓಡುತ್ತದೆ. ಆದರೆ ದುಂದುಮೆ ಪದದ ಓಟವೇ ಬೇರೆ. ಪದದುದ್ದಕ್ಕೂ ಒಂದೊಂದು ಹೊಸ ಭಂಗಿಯನ್ನು ಅದು ಪ್ರಕಟಿಸಬಲ್ಲದು. ಇದಕ್ಕೆ ಮುಖ್ಯ ಕಾರಣ ದುಂದುಮೆ ಪದದ ಪಕ್ಕವಾದ್ಯ. ಅದಕ್ಕೆ 'ದಿಮ್ಮು' ಎಂದು ಕರೆಯುತ್ತಾರೆ. ದಿಮ್ಮು ಆಗಾಗ ತನ್ನ ಗತಿಯನ್ನು ಬದಲಿಸುತ್ತದೆ. ಅದರ ತಾಳ ತಾನಗಳಿಗೆ ಹೊಂದಿಕೊಂಡು ದುಂದುಮೆ ಪದ ಒಡನುಡಿಯಬೇಕಾಗುವುದು; ಅಲ್ಲಿಯೇ ದುಂದುಮೆಯ ವೈಶಿಷ್ಟ್ಯ ಒಡೆದು ಕಾಣುವುದು". ಈ ಸಂಗ್ರಹದಲ್ಲಿ 'ಆದಯ್ಯ;, 'ಪುರಾತನ ಪೂಜೆ', 'ಕೀಚಕವಧೆ', 'ಕಿತ್ತೂರು ದುಂದುಮೆ',

'ವೀರರಾಣಿ ಚೆನ್ನಮ್ಮ', 'ನುಲಿಯ ಚಂದಯ್ಯ', 'ಶ್ರೀ ಕೃಷ್ಣಲೀಲೆ', 'ಶಿವನಾಮದಿಂದ ಸವೆದೀತವಾಸ', 'ಹುಬ್ಬಳ್ಳಿಯ ಮಂಗ' ಮೊದಲಾದ ದುಂದುಮೆ ಹಾಡುಗಳಿವೆ. ಈ ವೈವಿಧ್ಯಪೂರ್ಣ ಹಾಡುಗಳನ್ನು ಸಂಪಾದಕರು ಅತ್ಯಂತ ಮುತುವರ್ಜಿಯಿಂದ ಸಂಪಾದಿಸಿದ್ದರಿಂದ ಸಂಪಾದನ ಶಿಸ್ತು ಒಡೆದುಕಾಣುತ್ತದೆ.

ಡೊಳ್ಳಿನ ಹಾಡು :

ಕುರುಬರ ಆರಾಧ್ಯ ದೈವ ಬೀರಣ್ಣನ ಮಹಾತ್ಮೆಯನ್ನು ಸಾರುವ ಹಾಲುಮತದವರ ಡೊಳ್ಳು ಸಂಪ್ರದಾಯದ ಹಾಡುಗಳನ್ನು ಜೀವನ ಜೋಕಾಲಿ ಭಾಗ 6 ರಲ್ಲಿ ನೋಡುತ್ತೇವೆ. 'ಕುರುಬ ಜನಾಂಗದ ಪ್ರಾಚೀನತೆ–ಒಳಪಂಗಡಗಳು–ಅಧಿದೇವತೆ–ಬೀರಪ್ಪನ ಶಿಷ್ಯ ಪರಂಪರೆ–ಡೊಳ್ಳುವಾದ್ಯದ ಮಹತ್ವ–ಕುಣಿತ–ಹಾಡುಗಳ ಕುರಿತು ಅರ್ಥಪೂರ್ಣ ಪ್ರಸ್ತಾವನೆ ಬರೆಯುತ್ತ, 'ಡೊಳ್ಳಿನ ಹಾಡು' ಗಳನ್ನು ಸಂಪಾದಿಸುವಾಗಿನ ಕಷ್ಟವನ್ನು ಸಂಪಾದಕರು ಹೇಳಿಕೊಂಡಿದ್ದಾರೆ. ಜನಪದ ಅಭ್ಯಾಸಿಗೆ–ಸಂಶೋಧಕನಿಗೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅಳವಡಿಸಿಕೊಳ್ಳಬೇಕಾದ, ಇರಬೇಕಾದ ತಾಳ್ಮೆ, ಚಾಕಚಕ್ಯತೆ, ಸಂಗ್ರಹಬುದ್ಧಿ, ಇತ್ಯಾದಿ ಸಂಗತಿಗಳನ್ನು ಬರೆಯುತ್ತಾರೆ. ಅವು ತರುಣ ಜನಪದ ವಿದ್ವಾಂಸರಿಗೆ ಅನುಕರಣೀಯ, ಮಾರ್ಗದರ್ಶಿ. ಊರು ಊರುಗಳಲ್ಲಿ ಡೊಳ್ಳಿನ ಹಾಡು ಹೇಳುವವರು ಇದ್ದಾರೆ. ಅವರು ಬರೀ ಹಾಡುವವರು. ಅವರಿಗೆ ಹಾಡುಗಳನ್ನು ಬರೆದುಕೊಡುವವರು ಬೇರೆ. ಈ ಹಾಡುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇವನ್ನು ಹೆಚ್ಚಾಗಿ ಬರೆದವರು ವೀರಶೈವರೆಂಬುದನ್ನು ಅಭ್ಯಾಸದ ಸಹಾಯದಿಂದ ಸಂಪಾದಕರು ತಿಳಿಸುತ್ತಾರೆ. ಪ್ರತಿಯೊಂದು ಹಾಡಿನ ಕೊನೆಯಲ್ಲಿ ಹಾಡುಕಟ್ಟಿದವರ ಹೆಸರು ಬರುತ್ತದೆ. ಒಬ್ಬೊಬ್ಬ ಕವಿ ಅಸಂಖ್ಯಾತ ಹಾಡುಗಳನ್ನು ಹೇಳಿರುವುದು ಗಮನಾರ್ಹ: ರೇವಣ ಸಿದ್ಧ ವೀರಶೈವ. ಅವನ ಪ್ರೇರಣೆಯಿಂದ ಬಂದ ಹಾಡುಗಳೂ ಆ

ಮತವನ್ನೇ ಕುರಿತು ಹೇಳಿದಂತೆ ಕಂಡುಬರುತ್ತದೆ. ಸೃಷ್ಟಿಯ ಕ್ರಮ, ಮುಕ್ತಿಯ ನಿಯಮಗಳು, ವೀರಶೈವ ಸಂಪ್ರದಾಯಕ್ಕೆ ಹೊಂದಿಕೊಂಡು ಬರುವುದನ್ನು ಈ ಸಂಗ್ರಹದ ಹಾಡುಗಳಲ್ಲಿ ಗುರುತಿಸಬಹುದು. ಸುಂಕಾಪುರ ಅವರು ಕಷ್ಟಪಟ್ಟು ಈ ಹಾಡುಗಳನ್ನು ಸಂಗ್ರಹಿಸಿದ್ದಾರೆ. ತಮ್ಮ ತಮ್ಮ ಉದ್ಯೋಗಗಳಲ್ಲಿ ನಿತರಾದ ಕುರುಬರಿಂದ ಹಾಡುಗಳನ್ನು ಸಂಗ್ರಹಿಸುವುದು ಅಷ್ಟು ಸುಲಭದ ಕೆಲಸವಲ್ಲ. ಇದು ಎಲ್ಲ ಜನಪದ ಸಂಗ್ರಾಹಕರ ಅನುಭವಕ್ಕೆ ಬಂದಿರುವ ಸಂಗತಿ. ಅವರಿಗೆ ಎಪ್ಪ, ಎವ್ವ ಎಣ್ಣ.... ಎಂದು ಗದ್ದತುಟಿ ಹಿಡಿದು, ರಮಿಸಿ, ನಕ್ಕುನಲಿಸಿ, ಕೆಲವು ಸಲ ಅವರಿಗೆ ಚಹಾಕುಡಿಸಿ, ಊಟ ಮಾಡಿಸಿ, ಇಲ್ಲ ಒಂದಿಷ್ಟು ಹಣ ಕೊಟ್ಟು ಹಾಡುಗಳನ್ನು ·ಸಂಗ್ರಹಿಸುವ ಪರಿಸ್ಥಿತಿಯನ್ನು ಸುಂಕಾಪುರ ಅವರು ಎದುರಿಸಿದ್ದಾರೆ. ಇವುಗಳನ್ನು ಸಂಗ್ರಹಿಸುವಲ್ಲಿ ಎಂ.ಎ. ಪ್ರಥಮ ವರುಷದ (1974–75) ಜಾನಪದ ಸಾಹಿತ್ಯದ ವಿದ್ಯಾರ್ಥಿಗಳ ನೆರವನ್ನು ಪಡೆದಿದ್ದಾರೆ. ನೆರವಾದ ವಿದ್ಯಾರ್ಥಿಗಳನ್ನು ಕೃತಜ್ಞತೆಯಿಂದ ನೆನೆದು, ಸಂಪಾದಕನ ಪ್ರಾಮಾಣಿಕತೆಯನ್ನು ಸುಂಕಾಪುರ ಅವರು ಮೆರೆದಿದ್ದಾರೆ. ಒಟ್ಟಿನಲ್ಲಿ ಒಬ್ಬ ಪ್ರಾಮಾಣಿಕ ಜಾನಪದ ಸಂಪಾದಕನ ಎಲ್ಲ ಅರ್ಹತೆಗಳನ್ನು ಪ್ರಸ್ತುತ ಸಂಪಾದಕರು ಹೊಂದಿದ್ದರೆಂದು ಪ್ರಸ್ತುತ ಸಂಗ್ರಹಗಳಿಂದ ಸಾಬೀತಾಗುತ್ತದೆ. ಶ್ರದ್ಧೆ, ನಿಷ್ಠೆ, ತಾಳ್ಮೆ, ಪ್ರಾಮಾಣಿಕತೆ, ಕಷ್ಟ ಸಹಿಷ್ಣುತೆ, ಛಲ, ವಿಷಯದ ಸರಿಯಾದ ಗ್ರಹಿಕೆ ಹಾಗೂ ಎಲ್ಲರೊಳಗೊಂದಾಗುವ ಸಾಮಾನ್ಯ ಗುಣಗಳಿಂದಾಗಿಯೇ ಡಾ। ಸುಂಕಾಪುರ ಅವರು 'ಡೊಳ್ಳಿನ ಹಾಡುಗಳಂಥ ಅಪರೂಪದ ಸಂಗ್ರಹಗಳನ್ನು ಹೊರತಂದರು.

ಗಂಗಿಗೌರೀ ಸಂವಾದ :

'ಗಂಗೀಗೌರೀ ಸಂವಾದ' – ಒಂದು ಸುಂದರವಾದ ಹಾಡುಗಬ್ಬ. ಇದನ್ನು ರಚಿಸಿದ ಕವಿ ಶಿವಗಂಗೆಯ ಹಿರಿಯ ಸಿಂಹಾಸನದ ಗುರು ಸಂಗಮೇಶ್ವರನ ಕರಕಮಲ ಸಂಜಾತನಾದ ತರುಳಚರಪತಿ. ಜನಪದ

ಸಾಹಿತ್ಯದಲ್ಲಿ ಗಂಗಿಗೌರಿಯರ ಸಂವಾದವು ಹಲವಾರು ರೂಪದಲ್ಲಿ ತಲೆದೋರಿದೆ. ತ್ರಿಪದಿ, ಹಾಡು, ಕೋಲಾಟ, ದುಂದುಮೆ, ಡೊಳ್ಳಿನ ಪದ... ಹೀಗೆ ರೂಪತಾಳಿ ಬಂದಿರುವುದು ಈ ಕಥೆಯ ಮೇಲ್ಮೆಯನ್ನು ಜನಾನುರಾಗವನ್ನು ಸೂಚಿಸುತ್ತದೆ. ಗಂಗಿಗೌರಿ ಸಂವಾದದಂತಹ ಜನಪದ ಮಹಾಕಾವ್ಯಕ್ಕೂ ವಸ್ತುವಾಗುವ ಭಾಗ್ಯ ಪಡೆದಿದೆ. ಶ್ರುತಿ-ವೇದಶಾಸ್ತ್ರಗಳಲ್ಲಿ ಈ ಕಥೆಯನ್ನು ಸಂದರ್ಭಾನುಸಾರವಾಗಿ ಎತ್ತಿಕೊಂಡು ಸಮರ್ಥಿಸಲಾಗಿದೆ. ಬ್ರಹ್ಮಾಂಡ ಪುರಾಣದಲ್ಲಂತೂ ಈ ಬಗೆಗೆ ಮಹಾಪೂರವೇ ಬಂದಿದೆ. ಇದನ್ನೆಲ್ಲ ಗಮನಿಸಿದರೆ ಗಂಗಿಗೌರಿಯರ ಸಂವಾದ ಕಥೆ ಪಂಡಿತ ಪಾಮರರೆಲ್ಲರಿಗೂ ಮೆಚ್ಚಿನದೆಂಬುದು ಸ್ಪಷ್ಟವಾಗುತ್ತದೆ.

'ಗಂಗಿಗೌರಿಯರ ಕಥೆ ಜನಸಾಮಾನ್ಯರ ಅನುಭವದ ಕಥೆಯೇ. ಗಂಗಿ, ಗೌರಿ ದೇವಲೋಕದವರಾಗಿರಬಹುದು. ಕಾವ್ಯವನ್ನು ಓದುತ್ತ ಹೋದಂತೆ ಅವರು ನಮ್ಮ ನಿಮ್ಮವರೇ ಆಗಿಬಿಡುವರು. ಅವರು ಜಗಳಾಡುವುದಂತೂ ಯಾರಿಗೂ ಹೊಸದಲ್ಲ. ಜೋಡು ಹೆಂಡಿರನ್ನು ಮಾಡಿಕೊಂಡವನ ಮನೆಯಲ್ಲಿ ನಡೆಯುವ ನಿತ್ಯ ಕಲಹ; ಸವತಿ ಮಕ್ಕಳಾದ ಗಂಗಿಗೌರಿಯರು ನಿತ್ಯ ಜೀವನದಿಂದ ಎತ್ತಿಕೊಂಡ ಪಾತ್ರಗಳಾಗಿ ಜೀವಕಳೆಯಿಂದೊಡಗೂಡಿ ಬೆಳಗುವರು' ಎಂದು ಸಂಪಾದಕ ಸುಂಕಾಪುರರು ಹೇಳಿದುದು ಸರಿಯಾದುದೇ ಆಗಿದೆ. ಅವರು ಹೇಳಿದಂತೆ ಇಲ್ಲಿಯ ಪೌರಾಣಿಕ ಕಥೆಯ ಹಾಡುಗಳನ್ನು ಓದುತ್ತ ಹೋದರೆ ಇದು ನಮ್ಮ ನಿಮ್ಮ ಪ್ರತಿದಿನದ ಸಂಸಾರಿಕ ತಾಪತ್ರಯದ ಪ್ರತಿಬಿಂಬವೇ ಎನ್ನಿಸುತ್ತದೆ.

ಕಥೆಯನ್ನು ಒಬ್ಬರ ಬಾಯಿಂದ ಇನ್ನೊಬ್ಬರು ಕೇಳುವಂತಾಗಿ ಕಥೆಯ ಚಮತ್ಕಾರ ಉಂಟಾಗುತ್ತದೆ; ಕಾವ್ಯದ ಭಾಷೆ ಕೂಡ ಎಲ್ಲರ ತಿಳಿಗನ್ನಡವೇ ಆಗಿದೆ.

ಹಳಗನ್ನಡಗಳಲ್ಲವಿನ್ನು ಬಸವಯ್ಯ । ಗೋಪ್ಯ
ಒಳಗನ್ನಡಗಳಲ್ಲವಿನ್ನು ಬಸವಯ್ಯ
ಎಳೆಯ ಬಾಲ ನಗುವಂತಿನ್ನು ಬಸವಯ್ಯ । ಎನ್ನ
ತಿಳಿಗನ್ನಡವ ಲಾಲಿಸಿನ್ನು ಬಸವಯ್ಯ

ಈ ಬಗೆಯ ಕಾವ್ಯ ಕನ್ನಡದಲ್ಲಿ ಇಂದಿನವರೆಗೂ ದೊರೆತಿರಲಿಲ್ಲ. 'ಬೆದಂಡೆ' ಗೆ ಲಕ್ಷಣ ದೊರೆತಿತ್ತು. ಲಕ್ಷ್ಯವೇ ಸಿಕ್ಕಿರಲಿಲ್ಲ. ಆ ದೃಷ್ಟಿಯಿಂದಲೂ ಈ ಕೃತಿ ಮಹತ್ವದ್ದು; ಅಂಥ ಅಪರೂಪದ ಕೃತಿಯನ್ನು ಮೊಟ್ಟಮೊದಲು ಸಂಪಾದಿಸಿದ ಸುಂಕಾಪುರ ಅವರು ಅಭಿನಂದನಾರ್ಹರು. ಈ ಕೃತಿಗೂ ದೀರ್ಘಪ್ರಸ್ತಾವನೆ ಬರೆದಿದ್ದಾರೆ. ಪುರಾಣ ಮತ್ತು ಜನಪದ ಲೋಕದ ಸರಿಯಾದ ಗ್ರಹಿಕೆಯ ಹಿನ್ನೆಲೆಯಲ್ಲಿ ಅವೆರಡನ್ನೂ ತೌಲನಿಕವಾಗಿ ಅಭ್ಯಸಿಸಿ–ಸಂಪಾದಿಸಿ ಓದುಗರ ಮುಂದಿಟ್ಟುದು ಸುಂಕಾಪುರರ ಪುರಾಣ–ಜನಪದ ಪ್ರಜ್ಞೆಯ ಪ್ರತೀಕವಾಗಿದೆ.

ಕೋಲುಪದ

ಜೀವನಜೋಕಾಲಿ ಭಾಗ 8 ರಲ್ಲಿ 'ಕೋಲುಪದ' ಗಳನ್ನು ಸಂಪಾದಿಸಿದ್ದಾರೆ. 'ಕೋಲಾಟವೊಂದು ಗುಂಪುಗುಣಿತ, ರಿಂಗಣಗುಣಿತ. ಈ ಆಟಕ್ಕೆ ಕನಿಷ್ಠ ಮೂರು ಜನರಾದರೂ ಬೇಕು. ಸಂಖ್ಯೆ ಹೆಚ್ಚಿದ್ದರೆ ವಾಸಿ. ಭಾಗವಹಿಸುವವರ ಸಂಖ್ಯೆ ಮಿತಿಮೀರಿದರೆ ಗುಂಪುಗುಣಿತದ ಲಯಬದ್ಧತೆಗೆ ಭಂಗ ಬರುವುದು ಸುಲಭ ಸಾಧ್ಯ. ಆದ್ದರಿಂದಲೇ ಕೋಲಾಟದ ಮೇಳದಲ್ಲಿ 8 ಇಲ್ಲವೆ 12 ಜನರಿದ್ದರೆ ಆಟಕ್ಕೆ ಹತೋಟಿ ಬರುವುದು' ಎಂದು ಆಟದ ಮಹತಿಯನ್ನು ಸುಂಕಾಪುರ ನೀಡುತ್ತಾರೆ. ಕೋಲಾಟದ ಜತೆಯಲ್ಲಿ ಸಾಗುವ ಹಾಡುಗಳನ್ನು ಈ ಸಂಗ್ರಹದಲ್ಲಿ ಹಿಡಿದಿಟ್ಟಿದ್ದಾರೆ. ತುಂಬ ವ್ಯವಸ್ಥಿತವಾಗಿ ಹಾಡುಗಳನ್ನು ಸಂಪಾದಿಸಿ, ಅದಕ್ಕೆ ಉಚಿತವಾದ ಪ್ರಸ್ತಾವನೆಯನ್ನೂ ಸಂಪಾದಕರು ಬರೆದಿದ್ದಾರೆ.

ಜೋಗತಿಹಾಡು :

ಉತ್ತರ ಕರ್ನಾಟಕದ ಸವದತ್ತಿ ಯಲ್ಲಮ್ಮನ ಮಹಾತ್ಮೆಯನ್ನು ಸಾರುವ 'ಜೋಗತಿಹಾಡು' ಗಳನ್ನು 'ಜೀವನ ಜೋಕಾಲಿ' ಯ ಭಾಗ–9 ರಲ್ಲಿ ಸಂಗ್ರಹಿಸಿದ್ದಾರೆ. ಹೆಂಗಸರ ವೇಷದೋರುವ ಗಂಡಸು ಜೋಗಪ್ಪ ಸೀರೆಯುಟ್ಟು, ಕುಪ್ಪಸ ತೊಟ್ಟು, ಅಲಂಕಾರವಿಟ್ಟು, ಜಡೆಬಿಟ್ಟು ಎಲ್ಲಮ್ಮನನ್ನು ಸ್ತುತಿಸುತ್ತ ಭಿಕ್ಷೆ ಬೇಡುವುದು ಜೋಗಪ್ಪನ ವೃತ್ತಿ. ಕಾಲಲ್ಲಿ ಗೆಜ್ಜೆಕಟ್ಟಿ, ಕುತ್ತಿಗೆಯಲ್ಲಿ ಕವಡೆಯ ಸರ ಧರಿಸಿ, ಹಣೆಗೆ ಭಂಡಾರ ಬಳಿದುಕೊಂಡು ಜಗಹೊತ್ತು ಕುಣಿಯುವುದು ಅವನ ಪ್ರವೃತ್ತಿ; ಹಾಡಿಗೆ ತಕ್ಕ ಕುಣಿತ, ಕುಣಿತಕ್ಕೆ ಸರಿಯಾಗಿ ಮೈಮಣಿತ; ಹಾಡಿದ್ದೇ, ಕುಣಿದದ್ದೇ ಕುಣಿದದ್ದು... ಜೋಗಪ್ಪನ ಕುಣಿತಕ್ಕೆ ಹಿಮ್ಮೇಳ ಜೋಗತಿಯರದು. ಇವರು ಬಿಳಿ ಸೀರೆಯುಟ್ಟು, ಕವಡೆಯ ಸರ ಧರಿಸಿ, ಭಂಡಾರದ ಚೀಲವನ್ನು ಬಗಲಲ್ಲಿ ತೂಗುಹಾಕಿಕೊಂಡು ಎಲ್ಲಮ್ಮನ ಮಹಿಮೆಗಳನ್ನು ಹಾಡುವರು. ಚೌಡಿಕೆ, ತಾಳ, ಕುಡುಹು ಇವರು ನುಡಿಸುವ ಪಕ್ಕವಾದ್ಯಗಳು.

"ಎಲ್ಲಮ್ಮ ನಿನ್ನ ಪಾದಕ ಉಧೋ ಉಧೋ ಉಧೋ
ಮಂಗಳವಾರ ಮಾಯಕಾರತಿ ಉಧೋ ಉಧೋ ಉಧೋ ಉಧೋ
ಶುಕ್ರವಾರದ ಶುಭದೇವಿ ನಿನ್ನ ಪಾದಕ ಉಧೋ ಉಧೋ

. . . .

ಏಳು ಕೊಳ್ಳದೆಲ್ಲಮ್ಮ ನಿನ್ನ ಪಾದಕ ಉಧೋ ಉಧೋ"

ಯಲ್ಲಮ್ಮನ ಸ್ತುತಿಗೀತೆಗಳನ್ನು ಈ ಬಗೆಯಾಗಿ (ಉಧೋ ಉಧೋ...) ಹಾಡುವ ಸಂಪ್ರದಾಯವಿದೆ. ದೀರ್ಘ ಪ್ರಸ್ತಾವನೆಯೊಂದಿಗೆ ಇಲ್ಲಿ 'ಜೋಗತಿ ಹಾಡು' ಗಳನ್ನು ಸಂಪಾದಕರು ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿದ್ದಾರೆ.

ಕನ್ನಡ ಬಯಲಾಟಗಳು :

ನಮ್ಮ ಜನಪದರಿಗೆ 'ಬಯಲಾಟ' ಗಳು ಮನರಂಜನೆಯ

ಸಾಧನಗಳು ಹಾಗೂ ನೀತಿಬೋಧೆಯ ಪಾಠಶಾಲೆಗಳು ಹೌದು. 3/4ನೇ ತರಗತಿಯವರೆಗೆ ಓದಿದ ಆಗಿನ ಕನ್ನಡ ಶಾಲೆಯ ಶಿಕ್ಷಕರು ಶಾಸ್ತ್ರಪುರಾಣ ಓದಿದವರು, ಕೇಳಿಸಿಕೊಂಡವರು. ಅಲ್ಲಿಯ ಕಥೆಗಳನ್ನು ಆಯ್ದುಕೊಂಡು ಬಯಲಾಟಗಳನ್ನು ರಚಿಸಿದ್ದಾರೆ. ಆ ಬಯಲಾಟದ ಕತೆಗಳು ಅಟ್ಟವೇರಿ ಗ್ರಾಮೀಣರೆಲ್ಲರನ್ನು ಖುಶಿಗೊಳಿಸಿದುವು. ಇಂಥ ಬಯಲಾಟದ ಹಸ್ತಪ್ರತಿಗಳು ಲೆಕ್ಕವಿಲ್ಲದಷ್ಟು ಹಳ್ಳಿಗರಲ್ಲಿ ದೊರಕುತ್ತವೆ; ಕೆಲವು ಆಟದ ರೂಪದಲ್ಲಿ ಮಾತ್ರ ಇವೆ. ಈ ಆಟಗಳನ್ನು ಹಲವು ಬಾರಿ ಕಣ್ಣಾರೆ ನೋಡಿ, ಆನಂದಿಸಿ, ಸಂಗ್ರಹಿಸಿ, ಅಚ್ಚುಕಟ್ಟಾಗಿ ಸುಂಕಾಪುರ ಅವರು ಪ್ರಕಟಿಸಿದ್ದಾರೆ. ಉತ್ತರ ಕರ್ನಾಟಕದ ತುಂಬೆಲ್ಲ ಸುತ್ತಾಡಿ ಸಣ್ಣಾಟ, ದೊಡ್ಡಾಟ, ಪಾರಿಜಾತದ ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಅವೆಲ್ಲವೂ ಇಲ್ಲಿ ಮೊದಲಬಾರಿಗೆ ಪ್ರಕಟಗೊಳ್ಳುತ್ತಿರುವುದು ಸುಂಕಾಪುರರಿಂದಲೇ ಎಂಬುದೂ ಗಮನಾರ್ಹ ಸಂಗತಿ ಮತ್ತು ಅದನ್ನೆಲ್ಲ ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟಿಸಿದ್ದು ಅಷ್ಟೇ ಗಮನಾರ್ಹ; 'ಜಾನಪದ ಸಾಹಿತ್ಯ ಮಾಲೆ' ಅಡಿಯಲ್ಲಿ ಪ್ರಕಾಶಿತಗೊಳಿಸಲಾಗಿದೆ.

ಶ್ರೀ ಕೃಷ್ಣ ಪಾರಿಜಾತ :

ಇದು ವಿಶಿಷ್ಟ ರಂಗಕಲೆ. ಭಕ್ತಿ ಶೃಂಗಾರಗಳ ರಸಮಿಶ್ರಣ ಇದರಲ್ಲಿದೆ. ಅಪರಾಳ ತಮ್ಮಣ್ಣ ಮತ್ತು ಸಿರಗುಪ್ಪ·ಸದಾಶಿವರಾಯರ ಈ ಕೃತಿಯನ್ನು ರಂಗಕೃತಿಯಾಗಿ ಮಾರ್ಪಡಿಸಿ, 'ಪಾರಿಜಾತ ಬಯಲಾಟ' ವನ್ನು ಜನಪ್ರಿಯಗೊಳಿಸಿದವನು ಕುಲಗೋಡ ತಮ್ಮಣ್ಣ. 'ನೋಡಿರೋ ಬಲಭೀಮನ ದಯವಿದು' – ಸ್ತುತಿಯೊಂದಿಗೆ ಆರಂಭವಾಗುವ ಈ ಆಟದಲ್ಲಿ ಗೋಪಾಲಗೊಲ್ಲತಿಯರ ಸಂವಾದ, ರುಕ್ಮಿಣಿ–ಸತ್ಯಭಾಮೆಯರ ವಿರಸ ರಸಿಕರಿಗೆ ರಸದೂಟ ಉಣಬಡಿಸುತ್ತವೆ. 'ಕ್ಷೀರ ಸಾಗರ ತವರಮನಿ, ಹೆಪ್ಪು ಮುರಿಯದ ಮೊಸರ, 'ಮಾವ ಸೆರಗಬಿಡೊ', 'ಚಂದ್ರಗಾವಿಯ ನುಟ್ಟು' ಇತ್ಯಾದಿ ಹಾಡುಗಳು ಪಾರಿಜಾತದ ವಿಶಿಷ್ಟ ಸಂಗೀತ ಸುಧೆಯನ್ನು

ನೀಡುತ್ತವೆ. ಜನರಿಗೆ ಹುಚ್ಚು ಹಿಡಿಸಿದ ಆಟವಿದು. ಇದನ್ನು ನೋಡಿ ಆನಂದಪಟ್ಟ ಸುಂಕಾಪುರ ಅವರು 'ಶ್ರೀ ಕೃಷ್ಣ ಪಾರಿಜಾತ' ಬಯಲಾಟಗಳ ರಾಜ ಎಂದು ಹೊಗಳಿದರು; ಮಾತ್ರವಲ್ಲ ಇದನ್ನು ಕೃತಿರೂಪದಲ್ಲಿ ಸಂಗ್ರಹಿಸಿ, ಸಂಶೋಧಿಸಿ ಕೊಟ್ಟಿದ್ದಾರೆ. ಆಡುಭಾಷೆಯಲ್ಲಿಯ ಭಾಗವತ ಘೂತಿಯರ ಸಂಭಾಷಣೆಗಳನ್ನು ಇದ್ದಕ್ಕಿದ್ದಂತೆ ಹಿಡಿದಿಟ್ಟು ಪ್ರಕಟಿಸಿದ್ದಾರೆ. ಇಂಥ ರಸಾನುಭವ ನೀಡುವ ಕೃತಿಯನ್ನು ಪ್ರಕಟಿಸಿದ ಸುಂಕಾಪುರ ಅವರು ನಿಜವಾಗಿಯೂ ರಸಿಕರು.

ಜಾನಪದ ಜೀವನ, ಸಾಹಿತ್ಯಗಳಲ್ಲಿ ಸುಂಕಾಪುರ ಅವರು ಸಿದ್ಧಹಸ್ತರು. ಈ ಕಥೆಯನ್ನು ಬಹಳ ಪರಿಶ್ರಮದಿಂದ ಜೋಕೆ–ತೂಕದಿಂದ ಸಂಗ್ರಹಿಸಿ, ಸಂಸ್ಕರಿಸಿ, ಸಂಪಾದಿಸಿದ್ದಾರೆ. ಹಸ್ತಪ್ರತಿಗಳು ಲಭ್ಯವಿಲ್ಲದ ಪಾರಿಜಾತದ ಆಟದ ಪ್ರಯೋಗಗಳನ್ನೇ ಗಮನದಲ್ಲಿಟ್ಟುಕೊಂಡು ಕೃತಿಸಂಪಾದನ ಕಾರ್ಯಕ್ಕೆ ತೊಡಗಿದಾಗ ಉಂಟಾದ ಕಷ್ಟವನ್ನು ಸುಂಕಾಪುರ ಹೀಗೆ ವಿವರಿಸಿದ್ದಾರೆ. 'ಶ್ರೀ ಕೃಷ್ಣಪಾರಿಜಾತ ಪ್ರಕಟಿಸುವ ಗೋಜಿಗೆ ಹೋಗಿ ನಮ್ಮ ಅನುಭವವನ್ನು ನಾವೇ ಹಿರಿದಾಗಿಸಿಕೊಂಡಂತಾಯಿತು. ನಿಜ, ಆದರೆ ಕುಲಗೋಡ ತಮ್ಮಣ್ಣನ ಪಾರಿಜಾತ ಹಸ್ತಪ್ರತಿಗಳು ಸಿಗುವುದೇ ಇಲ್ಲ; ಇದ್ದರೂ ನಮಗೆ ಸಿಗಲಿಲ್ಲ. ಈ ಬಯಲಾಟವನ್ನು ಸಂಪಾದಿಸಿ ಪ್ರಕಟಿಸುವ ಇಚ್ಛೆ ಮಾತ್ರ ಹಿರಿದಾಯಿತು. ಒಂದೆರಡು ಕಡೆಗೆ ಹೋಗಿ ಇಡೀ ಪಾರಿಜಾತನನ್ನು ಸಜೀವವಾಗಿ ಧ್ವನಿಮುದ್ರಿಸಿಕೊಂಡು ಬಂದೆವು. ಧ್ವನಿಮುದ್ರಿಕೆಯನ್ನು ಲಿಪಿಗೆ ಇಳಿಸುವ ಕಾರ್ಯವಂತೂ ತಲೆಬೇಸರ, ತರುವಂತಹುದು. ಛಲಕ್ಕೆ ಬಿದ್ದು ಆ ಕಾರ್ಯವನ್ನೂ ಮುಗಿಸಲಾಯಿತು; ಪರಿಷ್ಕರಣ ಕಾರ್ಯಕ್ಕೆ ಕೈಹಾಕಬೇಕೆಂದರೆ ಮಾತುಕತೆ, ಹಾಡು ಪಾಡು, ತಾಳಮೇಳವಿಲ್ಲದೆ ನಡೆದುದು ಕಂಡುಬಂತು. ಮುಂದೇನು ಗತಿ? ಪಾರಿಜಾತ ಪಾತ್ರಧಾರಿಗಳನ್ನು ರಮಿಸಿ ಹಿಡಿದು ಅವರ ಬಾಯಿಂದಲೇ ಬಂದುನ್ನು ಬರೆದುಕೊಳ್ಳುವ ನಿರ್ಧಾರಕ್ಕೆ ಬಂದೆವು. ಆ ಕಾರ್ಯಕ್ಕೆ ಕೈ ಹಾಕಿದರೆ ಒಬ್ಬನು ಸಿಕ್ಕರೆ ಇನ್ನೊಬ್ಬ ಸಿಗಲಿಲ್ಲ. ಕಷ್ಟೆ

ತೂಕ ಮಾಡುವವನ ಸ್ಥಿತಿ ನಮ್ಮದಾಯಿತು. ಒಬ್ಬ ಹೀಗೆ ಮಾತು ಹೇಳಿದರೆ ಇನ್ನೊಬ್ಬ ಹಾಗೆ ಮಾತು ಹೇಳುತ್ತಿದ್ದ. ಕೊನೆಗೆ ಬೆಟಗೇರಿ ಕೃಷ್ಣ ಶರ್ಮ, ಮುರಿಗೆಪ್ಪ ಸೋರೆಗಾಂವಿ (ಕಲಾವಿದ), ನಿಜಲಿಂಗಮ್ಮ ಕೊಪ್ಪಳ, ಎನ್.ಕೆ. ರಂಗಣ್ಣ ಮುಂತಾದವರ ನೆರವಿನಿಂದ ಶುದ್ಧಪ್ರತಿಯನ್ನು ಸಿದ್ಧಗೊಳಿಸಿದರು. 'ಕಲಾಮೂಲ–ಕಲಾವಿಭಾಗ–ಕಲಾಸಂಸ್ಕೃತಿ–ನೃತ್ಯಕಲೆ–ಸಮೂಹನೃತ್ಯ, ಗಾನಸುಧೆ–ತಾಳಲಯ–ದೇವಾಲಯ ಸಂಸ್ಕೃತಿ–ಗೊಂಬೆಯಾಟ–ನೆರಳುಬೆಳಕು–ಗುಡಿಯಿಂದ ಬಯಲಿಗೆ–ಆಟದ ವೈಶಿಷ್ಟ್ಯ–ಮೂಕಿ ಟಾಕಿ–ಜಾತಿಗಾರರು–ಬಯಲಾಟದ ಪ್ರಾಚೀನತೆ–ಆಟದ ಪ್ರಕಾರಗಳು–ದೊಡ್ಡಾಟದ ಭವ್ಯತೆ–ಸಣ್ಣಾಟದ ನವ್ಯತೆ–ಶ್ರೀ ಕೃಷ್ಣ ಪಾರಿಜಾತದ ಕಥೆ–ಅಪರಾಳ ಪಾರಿಜಾತ–ಕುಲಗೋಡ ಪಾರಿಜಾತ–ಹಾಡುಜೋಡು–ಪಾತ್ರ ಸೃಷ್ಟಿ–ವೇಷಭೂಷಣ–ಸರಸವಿರಸ–ಕೊನೆಯ ಮಾತು–ಹೀಗೆ ವ್ಯವಸ್ಥಿತವದ ಪ್ರಸ್ತಾವನೆಯನ್ನು ಈ ಕೃತಿಗೆ ಸಂಪಾದಕರು ಬರೆದಿದ್ದಾರೆ.

ಅಲ್ಲಮ ಪ್ರಭು :

ಪ್ರಸ್ತುತ 'ಅಲ್ಲಮ ಪ್ರಭು' ಸಣ್ಣಾಟ ಇತಿಹಾಸದ ವಸ್ತುವನ್ನೊಳಗೊಂಡಿದೆ. 12ನೇ ಶತಮಾನದ ಬಯಲ ಸದೃಶ ವ್ಯಕ್ತಿತ್ವದ ಅಲ್ಲಮಪ್ರಭು ಇಲ್ಲಿ ಕಥಾನಾಯಕ. ಗಂಡು ಹೆಜ್ಜೆನ್ನುವ ಪಂಗಡಕ್ಕೇ (ಹರದೇಶಿ) ಈ ಕಥೆ ಸೇರಿದಂತಿದೆ. ಇದರ ಕರ್ತೃ ಯಲ್ಲಪ್ಪ ಫಕ್ಕೀರಪ್ಪ ಮುನೆನ್ನಿ; ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಚಿಕ್ಕಹಳ್ಳಿ 'ಹಣ್ಣಿಕೇರಿ' ಈ ಕವಿಯ ಊರು. ಕವಿಯನ್ನು ಯಲ್ಲಪ್ಪ ಮಾಸ್ತರ ಎಂತಲೂ ಕರೆಯುತ್ತಾರೆ. ಇವರ ಕಾವ್ಯನಾಮ 'ಶಿವಾನಂದ' ಕವಿ. ಅಲ್ಲಮ ಪ್ರಭು ಆಟಕ್ಕೆ 'ಮಾಯಿ ಆಟ' ವೆಂತಲೂ ಕರೆದ ವಾಡಿಕೆಯಿದೆ. ಉತ್ತರ ಕರ್ನಾಟಕದಲ್ಲಿ ಜಯಭೇರಿ ಹೊಡೆದ ಆಟವಿದು.

ಯಾವುದೇ ಬಯಲಾಟಗಳ ಶುದ್ಧಪ್ರತಿಗಳು ಸಿಗುವುದಿಲ್ಲ. ಹಳ್ಳಿಗಳಿಗೆ ಹೋಗಿ ರಸಿಕರ ಮನವೊಲಿಸಿ, ಆಟವಾಡಿಸಿ; ಹಸ್ತಪ್ರತಿ

ಸಿದ್ಧಮಾಡಿ ಪ್ರಕಟಿಸುವ ಕಾರ್ಯ ದುಸ್ತರವಾದುದು. ಹಳ್ಳಿಯ ಜೀವನದ ಗಾಢವಾದ ಅನುಭವ, ನಿಕಟ ಸಂಪರ್ಕ ಹೊಂದಿರುವ ಸುಂಕಾಪುರ ಅವರು ಶ್ರಮವಹಿಸಿ ಈ ಕಾರ್ಯಸಾಧಿಸಿದ್ದಾರೆ. ಅವರ ಪ್ರಸ್ತುತ ಕಾರ್ಯ ಸಾಹಸದ್ದು. ಪಂಚಾಕ್ಷರಿ ಮತಿಗಟ್ಟಿ ಗವಾಯಿಗಳು, ಡಾ. ಎಂ.ಎಸ್. ಲಠ್ಠೆ ಇಂಥವರ ನೆರವಿನಿಂದ ಶುದ್ಧಪ್ರತಿ ಸಿದ್ಧಪಡಿಸಿದರು. ಕ್ಷೇತ್ರಕಾರ್ಯದಲ್ಲಿ ನೆರವಾದವರನ್ನು, ಪಾತ್ರಧಾರಿ ವಕ್ತೃಗಳನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಗ್ರಾಮೀಣರನ್ನೆಲ್ಲ ಸುಂಕಾಪುರ ಅವರು ಕೃತಜ್ಞತೆಗಳೊಂದಿಗೆ ಮರೆಯದೇ ಸ್ಮರಿಸಿದ್ದು ಅವರ ಪ್ರಾಮಾಣಿಕವಾದ ಹಿರಿಯಗುಣ.

'ಪರಂಪರೆ-ಶರಣರಾಟ-ಆಟದ ವಿಧಾನ-ಪೂರ್ವಸಿದ್ಧತೆ-ಕತೆಗಾರ-ಆಟದ ರಚನೆ- ದೀಪದ ವ್ಯವಸ್ಥೆ-ಗಣಸ್ತುತಿ, ಹಾಡುಗಾರಿಕೆ, ವಾದ್ಯಮೇಳ, ಸಂಭಾಷಣೆ; ಅಲ್ಲಮ ಪ್ರಭು-ಕರ್ತೃ-ಕೃತಿ-ಕಾವ್ಯನಾಮ-ಕಥಾಸಾರ-ಕಥೆಗೆ ಮೂಲ-ಪಾತ್ರ ಸೃಷ್ಟಿ-ಶೈಲಿ' ಇತ್ಯಾದಿ ಒಳನೋಟಗಳ ಮೂಲಕ ಸುದೀರ್ಘವಾದ ಪ್ರಸ್ತಾವನೆಯನ್ನು ಅಲ್ಲಮಪ್ರಭು ಶರಣರಾಟಕ್ಕೆ ಸಂಪಾದಕರು ಒದಗಿಸಿದ್ದಾರೆ.

ಪ್ರಮಿಳೆ :

ಇದು ಬೆಳುವಲನಾಡಿನಲ್ಲಿ ಪ್ರಸಿದ್ಧಿ ಪಡೆದ ಜನಪ್ರಿಯ ದೊಡ್ಡಾಟ; ಜನತೆಯ ಮೆಚ್ಚಿಗೆ ಪಡೆದ ಸುಂದರ ಬಯಲಾಟ. ಕಥಾವಸ್ತು, ಪಾತ್ರಸೃಷ್ಟಿ ಮತ್ತು ಶೈಲಿ ಎಲ್ಲ ದೃಷ್ಟಿಯಿಂದಲೂ ಉತ್ತಮವಾದ ಆಟವಿದು. ಜೈಮಿನಿ ಭಾರತದಲ್ಲಿ ಬರುವ ಅಶ್ವಮೇಧದ ಪೌರಾಣಿಕ ಕಥೆಯನ್ನು ಆಧರಿಸಿ ಈ ಬಯಲಾಟ ರಚಿತವಾಗಿದೆ. ಧಾರವಾಡ ಜಿಲ್ಲೆಯ ಅತ್ರಿಗೇರಿ ಮಾಸ್ತರರು ಇದನ್ನು ಬರೆದಿದ್ದಾರೆ. ಪ್ರಮೀಳೆಯ ವೃತ್ತಾಂತ ಇದರಲ್ಲಿ ಎದ್ದು ಕಾಣುವಂತೆ ರಚಿತವಾಗಿರುವುದು ಈ ಆಟದ ವೈಶಿಷ್ಟ್ಯ. ಗ್ರಾಮೀಣರಿಗೆ ಇದು ಪ್ರೀತಿಯ ಕಥೆ. ಸುಂಕಾಪುರ ಅವರು ಇದನ್ನೆಲ್ಲ ಅರಿತು ತುಂಬ ಮುತುವರ್ಜಿ ವಹಿಸಿ, ಕಷ್ಟಪಟ್ಟು 'ಪ್ರಮೀಳೆ' ದೊಡ್ಡಾಟವನ್ನು ಗ್ರಾಮೀಣರಿಗಾಗಿ

ಸಂಪಾದಿಸಿಕೊಟ್ಟಿದ್ದಾರೆ. 'ಬಯಲಾಟ-ಪೂರ್ವಸಿದ್ಧತೆ-ಅಟ್ಟ-ಹಾಡು-ವಾದ್ಯ-ಕುಣಿತ-ಬಣ್ಣ-ಉಡಿಗೆ ತೊಡಿಗೆ- ಹಾಸ್ಯ ಇತ್ಯಾದಿ ವಿವರಗಳನ್ನು ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ತಿರುನೀಲಕಂಠ :

ಇದು ಸಣ್ಣಾಟ. ಇದನ್ನು 'ಕಾದ್ರೊಳ್ಳಿ ಆಟ'ವೆಂತಲೂ ಕರೆಯುವರು. ರಚಿಸಿದ ಕವಿ ಕಾದ್ರೊಳ್ಳಿ ಗ್ರಾಮದವನಾದುದರಿಂದ ಇದನ್ನು ಕಾದ್ರೊಳ್ಳಿ ಆಟ ಎನ್ನುವರು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಕಾದ್ರೊಳ್ಳಿ ಗ್ರಾಮದ ನೀಲಕಂಠಪ್ಪ ಪತ್ತಾರ ಇದರ ಕರ್ತೃ. ತಿರುನೀಲ ಕಂಠದ ಕಥಾವಸ್ತು ಮೂಲ ತಮಿಳಿನದು. 63 ಜನ ಪುರಾತನರಲ್ಲಿ ಆಗಿಹೋದ 'ತಿರುನೀಲಕಂಠ' ಎಂಬುವನ ಚರಿತ್ರೆಯಿದು. ಕನ್ನಡದಲ್ಲಿ ಸುರಾಗ ಕವಿ ಮತ್ತು ಹರಿಹರಕವಿ ಬರೆದ ಚರಿತ್ರೆಗಳ ಆಧಾರದಿಂದ ನೀಲಕಂಠ ಕವಿ ಈ ಸಣ್ಣಾಟ ಬರೆದಿದ್ದಾನೆ.

ಈ ಬಯಲಾಟದಲ್ಲಿ ಭಕ್ತಿಯೇ ಮುಖ್ಯ ರಸ. ಅಲ್ಲಿ ಶೃಂಗಾರ, ಹಾಸ್ಯ ರಸಗಳ ಝಳಕು - ಇದ್ದರೂ ಅದು ಕೊನೆಯಲ್ಲಿ ಭಕ್ತಿಯಾಗಿಯೇ ಪರಿಣಮಿಸುವುದು ಒಂದು ವೈಶಿಷ್ಟ್ಯ. ಈ ಸಣ್ಣಾಟವು ಸಾಮಾನ್ಯ ಜನರಲ್ಲಿ ಭಕ್ತಿಯ ಬೀಜವನ್ನು ಬಿತ್ತಿ ಅನುಭವದ ನೀರುಣಿಸಿ ಆನಂದದ ಹೂಹಣ್ಣುಗಳನ್ನು ಕೊಡಬಲ್ಲುದಾಗಿದೆ. ಆದುದರಿಂದಲೇ ಈಗ 50 ವರ್ಷಗಳ ಹಿಂದೆ ಹಳ್ಳಿಹಳ್ಳಿಗಳಲ್ಲಿಯೂ ಈ ಆಟ ನಡೆಯುತ್ತಿತ್ತು. ನೂರಾರು ಸಲ ಆಟ ನೋಡಿದರೂ ಬೇಸರಿಯದ ಜನ ಇದ್ದರು. ಹಾಗಾಗಿ ಇಂದಿನ ಜನತೆಗೂ ಇಂಥ ಆಟಗಳನ್ನು ಸಂಶೋಧಿಸಿ ಸುಂಕಾಪುರರು ಪ್ರಕಟಿಸಿದ್ದಾರೆ.

'ತಿರುನೀಲಕಂಠ' ಬಯಲಾಟದ ಪ್ರತಿಗಳು ಹಳ್ಳಿಗಳಲ್ಲಿ ಸಾಕಷ್ಟು ದೊರೆಯುತ್ತವೆ. ಆದರೆ ಕೇಳಿದರೆ ಕೊಡುವುದಿಲ್ಲ, ಪ್ರಯಾಸಪಟ್ಟು ಸುಂಕಾಪುರರು 3 ಪ್ರತಿಗಳನ್ನು ಕಲೆಹಾಕಿ ಶುದ್ಧಪ್ರತಿಯನ್ನು

ಸಿದ್ಧಪಡಿಸುವಾಗಲೂ ತುಂಬ ಕಷ್ಟ ಅನುಭವಿಸಿದರು. ಬರೆಯುವವರು ತಪ್ಪು ಬರೆದಿದ್ದರು. ಕೆಲವು ಪುಟಗಳು ತ್ರುಟಿಕೆಯಾಗಿದ್ದುವು. ಮಾತಿನಲ್ಲಿ ಹೊಂದಾಣಿಕೆ ಇರಲಿಲ್ಲ. ತುಂಬ ಕಷ್ಟಪಟ್ಟು ಅಚ್ಚುಪ್ರತಿ ತಯಾರಿಸಿದರು. ಇತರ ವಿದ್ವಾಂಸರ, ಗಾಯಕರ ನೆರವನ್ನು ಪಡೆದರು; ಪಂಚಾಕ್ಷರಿ ಮತಿಘಟ್ಟ ಗವಾಯಿಗಳು, ಡಾ.ಎಂ.ಎಸ್. ಲಠ್ಠೆಯಂಥವರು ವಿಶೇಷ ಸಹಾಯ ನೀಡಿದರು. ಸಂಪಾದಕ ಸುಂಕಾಪುರ ಅವರು ಈ ಕೃತಿಗೂ ಸುದೀರ್ಘ ಪ್ರಸ್ತಾವನೆ ಬರೆದಿದ್ದಾರೆ.

ಶ್ರೀ ಕೃಷ್ಣ ಸಂಧಾನ :

ಇದು ಯಕ್ಷಗಾನ ಬಯಲಾಟ. 'ದೇವದಾಸ' ಎನ್ನುವ ಕವಿ ಇದನ್ನು ರಚಿಸಿದ್ದಾರೆ. ಇಲ್ಲಿಯ ಕಥೆಯನ್ನು ಮಹಾಭಾರತದ 'ಉದ್ಯೋಗಪರ್ವ' ದಿಂದ ಆಯ್ದುಕೊಳ್ಳಲಾಗಿದೆ. ಈ ಕೃತಿಗೂ ಅರ್ಥಪೂರ್ಣ ದೀರ್ಘವಾದ ಪ್ರಸ್ತಾವನೆಯನ್ನು ಸುಂಕಾಪುರ ಅವರು ಬರೆದಿದ್ದಾರೆ.

ಹೀಗೆ, ಶ್ರೀ ಕೃಷ್ಣ ಪಾರಿಜಾತ, ಸಣ್ಣಾಟ, ದೊಡ್ಡಾಟ, ಯಕ್ಷಗಾನ, ಕೋಲುಪದ, ಹೋಳಿ ಪದ, ದುಂದುಮೆ, ಜೋಗತಿ ಹಾಡು, ಗರತಿಯರ ಹಾಡು, ಚೌಪದನ ಮುಂತಾದ ಜಾನಪದ ಸಿರಿಸಂಪತ್ತನ್ನು, ಹಳ್ಳಿಗರ ಬಾಯಿಂದ ಕಷ್ಟಪಟ್ಟು ಸಂಗ್ರಹಿಸಿ, ಉತ್ತಮವಾದವುಗಳನ್ನು ಕೃತಿರೂಪದಲ್ಲಿ ಸಂಪಾದಿಸಿಕೊಟ್ಟಿದ್ದಾರೆ. ಇವು ಸುಂಕಾಪುರ ಅವರ ಜಾನಪದ ಆಸಕ್ತಿ, ಪ್ರಾಮಾಣಿಕ ದುಡಿಮೆ, ಪರಿಶ್ರಮ, ಪಾಂಡಿತ್ಯ, ಸಂಶೋಧನ ಶಕ್ತಿಗೆ ಹಿಡಿದ ಕನ್ನಡಿಗಳಾಗಿವೆ. ಈ ಸಂಗ್ರಹಗಳಿಗೆ ಅಭ್ಯಾಸಪೂರ್ಣ ಪ್ರಸ್ತಾವನೆಗಳನ್ನು ಬರೆದುದು ಜಾನಪದ ಆಸಕ್ತರಿಗೆ ತುಂಬ ಉಪಯುಕ್ತವಾಗಿದೆ. ಜಾನಪದ ಸಂಪಾದಕರಿಗೆ ಮಾರ್ಗದರ್ಶಿ ಸಂಶೋಧನ–ಸಂಪಾದನಗಳಿವು.

ಜಾನಪದ ಸಾಹಿತ್ಯ ದರ್ಶನ :

ಡಾ| ಎಂ.ಎಸ್. ಸುಂಕಾಪುರ ಅವರು ಕನ್ನಡ ವಿಭಾಗದ ಪ್ರಾಧ್ಯಾಪಕ–ಪ್ರಾಚಾರ್ಯರಾಗಿರುವ ಸಂದರ್ಭದಲ್ಲಿ ಧಾರವಾಡ, ಗುಲಬರ್ಗ, ಗದಗ, ಅಂಕೋಲ, ಇಳಕಲ್.... ಗಳಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಲನಗಳನ್ನು ತಮ್ಮ ನಿರ್ದೇಶನದಲ್ಲಿ ಹಮ್ಮಿಕೊಂಡು ಯಶಸ್ವಿಗೊಳಿಸಿ ಕೀರ್ತಿ ಸಂಪಾದಿಸಿದ್ದಾರೆ; ಅಲ್ಲಿ ಮಂಡಿತವಾದ ಪ್ರಬಂಧಗಳನ್ನು ಸಂಪಾದಿಸಿ 'ಜಾನಪದ ಸಾಹಿತ್ಯ ದರ್ಶನ' ಮಾಲಿಕೆಯಡಿಯಲ್ಲಿ ಹಲವು ಸಂಪುಟಗಳನ್ನು ಪ್ರಕಟಿಸಿದ್ದಾರೆ.

1975 ಫೆಬ್ರವರಿಯಲ್ಲಿ ದ್ವಿತೀಯ, ಕರ್ನಾಟಕ ಜಾನಪದ ಸಮ್ಮೇಲನವನ್ನು ಧಾರವಾಡದಲ್ಲಿಯೇ ಹಮ್ಮಿಕೊಳ್ಳಲಾಗಿತ್ತು. ಸಮ್ಮೇಲನದ ಅಧ್ಯಕ್ಷರು ಶ್ರೀಮತಿ ಜಯದೇವಿ ತಾಯಿ ಲಿಗಾಡೆ; ಉದ್ಘಾಟಕರು ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸು ಅವರು. ಸಮ್ಮೇಲನದ ಅಂಗವಾಗಿ ಜನಪದ ಕಥಾಗೋಷ್ಠಿ–ಜನಪದ ನಾಟಕ ಗೋಷ್ಠಿ–ಕಿತ್ತೂರು ಚೆನ್ನಮ್ಮ ಗೋಷ್ಠಿ ಹೀಗೆ ಮೂರು ವಿಚಾರಸಂಕಿರಣಗಳನ್ನು ಏರ್ಪಡಿಸಲಾಗಿತ್ತು. ಗೋಷ್ಠಿಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು 'ಜಾನಪದ ಸಾಹಿತ್ಯ ದರ್ಶನ' – ಭಾಗ 2ರಲ್ಲಿ ಸುಂಕಾಪುರ ಅವರು ಸಂಪಾದಿಸಿದರು; ಸಮ್ಮೇಲನದ ನಿರ್ದೇಶಕರು ಅವರೇ ಇದ್ದರು.

1976 ಡಿಸೆಂಬರ್‌ನಲ್ಲಿ 4ನೇ ಅ.ಕ. ಜಾನಪದ ಸಮ್ಮೇಲನ ಮತ್ತೆ ಧಾರವಾಡದಲ್ಲಿಯೇ ಸುಂಕಾಪುರ ಅವರ ನೇತೃತ್ವದಲ್ಲಿ ನಡೆಯಿತು. ಸಮ್ಮೇಲನದ ಅಧ್ಯಕ್ಷರು ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರರು; ಕುಲಪತಿ ಡಾ| ಆರ್.ಸಿ. ಹಿರೇಮಠರು ಸಮ್ಮೇಲನದ ಉದ್ಘಾಟಕರು. ಸಮ್ಮೇಲನದ ಅಂಗವಾಗಿ ಕನ್ನಡ ಜಾನಪದ ವಾದ್ಯ ಸಾಹಿತ್ಯವನ್ನು ಕುರಿತು ಎರಡು ವಿಚಾರ ಸಂಕಿರಣಗಳು–1) ಚರ್ಮವಾದ್ಯಗಳ ಹಿಮ್ಮೇಳದ ಹಾಡುಗಳು 2) ತಂತು ಹಾಗು ಇತರ ವಾದ್ಯಗಳ ಹಿಮ್ಮೇಳದ ಹಾಡುಗಳು

ಎಂದು ಏರ್ಪಾಡು ಮಾಡಲಾಗಿತ್ತು. ಕನ್ನಡ ವಾದ್ಯ ಸಾಹಿತ್ಯವನ್ನು ಕುರಿತು ವಿಚಾರಸಂಕಿರಣವನ್ನು ಪ್ರಪ್ರಥಮವಾಗಿ ನಡೆಸಿದ ಶ್ರೇಯಸ್ಸು ಕ.ವಿ.ವಿ.ಯದು; ಡಾ। ಸುಂಕಾಪುರ ಅವರದು. ಮಂಡಿತವಾದ ಪ್ರಬಂಧಗಳನ್ನು 'ಜಾನಪದ ಸಾಹಿತ್ಯ ದರ್ಶನ ಭಾಗ-4' ರಲ್ಲಿ ಪ್ರಧಾನ ಸಂಪಾದಕ ಸುಂಕಾಪುರ ಅವರು ಸಂಪಾದಿಸಿದ್ದಾರೆ.

'ಅಖಿಲ ಕರ್ನಾಟಕ ಜಾನಪದದ 5ನೇ ಸಮ್ಮೇಲನ (1978) ಗುಲಬರ್ಗಾದಲ್ಲಿ ಸುಂಕಾಪುರ ಅವರ ನಿರ್ದೇಶನದಲ್ಲಿ ಜರುಗಿತ್ತು. ಜೋಳದ ರಾಶಿ ದೊಡ್ಡನಗೌಡರು ಸರ್ವಾಧ್ಯಕ್ಷರಾಗಿದ್ದರು. 'ಭಜನೆ-ಲಾವಣಿ-ಗೀಗೀ ಸಂಪ್ರದಾಯ' ವಿಷಯ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ಇಲ್ಲಿ ಮಂಡಿತವಾದ ಪ್ರಬಂಧಗಳನ್ನು ಸುಂಕಾಪುರ ಅವರು ಜಾನಪದ ಸಾಹಿತ್ಯ ದರ್ಶನ ಭಾಗ 5 ರಲ್ಲಿ ಸಂಪಾದಿಸಿದ್ದಾರೆ.

1979 ರಲ್ಲಿ ಇಲಕಲ್‌ನಲ್ಲಿ 6ನೇ ಅ.ಕ. ಜಾನಪದ ಸಮ್ಮೇಲನ ಸುಂಕಾಪುರ ಅವರ ನಿರ್ದೇಶನದಲ್ಲಿ ಜರುಗಿತ್ತು. ಸಿಂಪಿಲಿಂಗಣ್ಣ ಸಮ್ಮೇಲನದ ಅಧ್ಯಕ್ಷರು; ಕುಲಪತಿ ಎಸ್.ಎಸ್. ಒಡೆಯರ್ ಸಮ್ಮೇಳನದ ಉದ್ಘಾಟಕರು. ಮೂರು ವಿಚಾರಸಂಕಿರಣಗಳನ್ನು ಏರ್ಪಡಿಸಲಾಗಿತ್ತು. ಉತ್ತರ ಕರ್ನಾಟಕದ ಜಾನಪದ ವೃತ್ತಿಕಾರರ ಜಾನಾಂಗಿಕ ಅಧ್ಯಯನವನ್ನು ಕುರಿತು ಸುಮಾರು 20 ಜನ ವಿದ್ವಾಂಸರು ಅಭ್ಯಾಸಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದರು. ಈ ಸಮ್ಮೇಳನದ 'ಜಾನಪದ ಸಾಹಿತ್ಯದರ್ಶನ ಭಾಗ-6' ಸಂಪುಟ ಸಿದ್ಧಪಡಿಸಿ, ಸಂಪಾದಿಸಿ ಓದುಗರ ಕೈಗೆ ಸಕಾಲದಲ್ಲಿ ನೀಡಿದರು.

1980 ರಲ್ಲಿ 7ನೇ ಅ.ಕ. ಜಾನಪದ ಸಮ್ಮೇಲನ ಪೀಠದ ಮುಖ್ಯಸ್ಥ ಸುಂಕಾಪುರ ಅವರ ನೇತೃತ್ವದಲ್ಲಿ ಗದಗದಲ್ಲಿ ಏರ್ಪಾಟಾಗಿತ್ತು. ಸಮ್ಮೇಳನದ ಸರ್ವಾಧ್ಯಕ್ಷರು ಎಚ್.ಎಲ್. ನಾಗೇಗೌಡರು; ಉದ್ಘಾಟನೆ ಕುಲಪತಿ

ಸದಾಶಿವ ಒಡೆಯರರು. ಗದಗಿನ ತೋಂಟದಾರ್ಯಪೀಠದ ಜಗದ್ಗುರು ಶ್ರೀ ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಇಲ್ಲಿ ಮಂಡಿತವಾದ ಪ್ರಬಂಧಗಳನ್ನು 'ಜನಪದ ಸಾಹಿತ್ಯ ದರ್ಶನ ಭಾಗ–7' ರಲ್ಲಿ ಡಾ। ಎಸ್.ಎಂ. ವೇಷಭೇಂದ್ರಸ್ವಾಮಿ ಅವರು, ಸುಂಕಾಪುರ ಅವರ ಸಹಕಾರದಿಂದ ಸಂಪಾದಿಸಿದರು.

1981ರಲ್ಲಿ 8ನೇ ಅ.ಕ. ಜಾನಪದ ಸಮ್ಮೇಲನವನ್ನು ಅಂಕೋಲೆಯಲ್ಲಿ ಸುಂಕಾಪುರ ಅವರೇ ಸಂಘಟಿಸಿದ್ದರು. ಅಧ್ಯಕ್ಷರು ಡಾ. ಎಲ್. ಆರ್. ಹೆಗಡೆ, ಉದ್ಘಾಟಕರು ಕುಲಪತಿ ಎಸ್.ಎಸ್. ಒಡೆಯರರು. 'ಕರ್ನಾಟಕದ ಸ್ತ್ರೀ ಗ್ರಾಮದೇವತೆಗಳು' ಕುರಿತು ಮೂರು ವಿಚಾರಸಂಕಿರಣ ಜರುಗಿದ್ದುವು. ಇಲ್ಲಿ ಮಂಡಿತವಾದ ಪ್ರಬಂಧಗಳನ್ನು 'ಜಾನಪದ ಸಾಹಿತ್ಯ ದರ್ಶನ' ಭಾಗ–8 ರಲ್ಲಿ ಸುಂಕಾಪುರ ಸಂಪಾದಿಸಿದ್ದಾರೆ. ಈ ಸಮ್ಮೇಲನದ 1ನೇ ಗೋಷ್ಠಿಯ ಅಧ್ಯಕ್ಷರಾಗಿಯೂ ಸುಂಕಾಪುರ ಜಾನಪದ ಕುರಿತ ಮೌಲಿಕ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ.

1982ರಲ್ಲಿ ಬನಹಟ್ಟಿಯಲ್ಲಿ ಜರುಗಿದ ಅ.ಕ. ಜಾನಪದ ಸಮ್ಮೇಲನ ಸರ್ವಾಧ್ಯಕ್ಷತೆಯನ್ನು ಡಾ। ಎಂ.ಎಸ್. ಸುಂಕಾಪುರ ಅವರು ಅತ್ಯಂತ ಪ್ರೀತಿಯಿಂದ ವಹಿಸಿಕೊಂಡಿದ್ದರು. 'ಕರ್ನಾಟಕ ಪುರುಷ ದೇವತೆಗಳು' ವಿಚಾರ ಸಂಕಿರಣದ ವಿಷಯವಾಗಿತ್ತು.

ಹೀಗೆ, ಎಂ.ಎಸ್. ಸುಂಕಾಪುರ ಅವರು ಹಲವು ಸಮ್ಮೇಳನಗಳಿಗೆ ಮೂಲ ಪ್ರೇರಣೆ, ಸತ್ವಪೂರ್ಣವಾದ ಸಂಯೋಜನೆ ಒದಗಿಸಿ, ಜಾನಪದ ಸಾಹಿತ್ಯ ದರ್ಶನ' ಹೆಸರಿನ ಹಲವು ವಿಶಿಷ್ಟ ಸಂಪುಟಗಳನ್ನು ಹೊರತರುವ ಮೂಲಕವೂ ಜನಪದ ಸಾಹಿತ್ಯ ಸೇವೆಗೈದಿದ್ದಾರೆ. ಬಹುಶ್ರುತ ಪಂಡಿತರಾದ ಇಬ್ಬರಿಗೆ ನಾನಾ ರೀತಿಯ ಸಹಕಾರ ನೀಡಿದವರು ವೃಷಭೇಂದ್ರಸ್ವಾಮಿ, ಕಲಬುರ್ಗಿ, ಇಮ್ರಾಪುರ ಮುಂತಾದವರು.

ಸಂದ ಗೌರವ-ಪ್ರಶಸ್ತಿ :

ಸುಂಕಾಪುರ ಅವರ ಜಾನಪದ ಕ್ಷೇತ್ರದ ಸಾಧನೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು 'ಜಾನಪದ ತಜ್ಞ' ಪ್ರಶಸ್ತಿ ನೀಡಿ ಗೌರವಿಸಿದೆ (1988), ಇವರಿಗೆ 'ಜಾನಪದ ಸಂಪದ' ಎಂಬ ಅಭಿನಂದನ ಗ್ರಂಥವನ್ನು ವಿದ್ಯಾರ್ಥಿಗಳು ಅಭಿಮಾನಿಗಳು ಸಮರ್ಪಿಸಿದ್ದಾರೆ (1982), 1982 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಸನ್ಮಾನಿಸಿದೆ, 9ನೇ ಅ.ಕ. ಜಾನಪದ ಸಮ್ಮೇಲನದ ಸರ್ವಾಧ್ಯಕ್ಷ ಸ್ಥಾನ ನೀಡಿ ಕ.ವಿ.ವಿ. ಗೌರವಿಸಿದೆ. ಇವರ ಅನುಪಮ ಕಾರ್ಯಸಾಧನೆಗೆ ಸಾರ್ವಜನಿಕ ವಲಯದಿಂದ ಹಲವಾರು ಗೌರವ ಸನ್ಮಾನಗಳು ಸಂದಿವೆ. ಸುಂಕಾಪುರ ಅವರ ಜೀವನ ಸಾಧನೆ ಕುರಿತಂತೆ ಎಂ.ಎಸ್. ಲಠ್ಠೆ ಬರೆದ ಕೃತಿಯನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಿಸಿದೆ (1975).

ಮುಗಿಸುವ ಮುನ್ನ :

ಡಾ. ಎಂ.ಎಸ್. ಸುಂಕಾಪುರ ಅವರ ಜೀವನಸಾಧನೆಯ ನೆಲೆಯ 'ವ್ಯಕ್ತಿ ಪರಿಚಯ'ವನ್ನು ಡಾ। ಸಿದ್ಧಯ್ಯ ಪುರಾಣಿಕರ ಮಾತಿನೊಂದಿಗೆ ಮುಗಿಸಬಹುದೆಂದು ತೋರುತ್ತದೆ : "ಸಂತೋಷವನ್ನು ಸೃಷ್ಟಿಸುವುದೇ ಈಶ್ವರಾರ್ಚನೆ ಎಂದು ಹೇಳಲಾಗಿದೆ. ಡಾ. ಸುಂಕಾಪುರರು ತಮ್ಮ ಸ್ನೇಹದಿಂದ, ಸದುವಿನಯದಿಂದ, ಸಾಹಿತ್ಯ ಸೇವೆಯಿಂದ, ಅಧ್ಯಯನ-ಅಧ್ಯಾಪನಗಳಿಂದ, ಸರಸ ಸಜ್ಜನಿಕೆಯಿಂದ, ಹಾಸ್ಯಲಹರಿಗಳಿಂದ, ಚತುರೋಕ್ತಿಗಳಿಂದ, ಗುಪ್ತದಾನಗಳಿಂದ, ಕರ್ತವ್ಯ ಪಾಲನೆಯಿಂದ ಅದೆಷ್ಟು ಸಂತೋಷವನ್ನು ಹುಟ್ಟಿಸಿರುವರೋ, ಅದೆಷ್ಟು ಸಂತೋಷವನ್ನು ಕೊಟ್ಟಿರುವರೋ ಯಾರು ಲೆಕ್ಕ ಮಾಡಬೇಕು? ಅವರ ಈ ರೂಪದ ಈಶ್ವರಾರ್ಚನೆಗೆ ಎಣೆಯುಂಟೆ?" ಇದಕ್ಕಿಂತ ಮಿಗಿಲಾದ ಮಾತು ಇದ್ದಂತಿಲ್ಲ!

* * *

ಸಹಜವಾದ ಹಾಸ್ಯ ಪ್ರವೃತ್ತಿಯನ್ನು ಮೈಗೂಡಿಸಿಕೊಂಡಿದ್ದ ಮರಿಬಸಪ್ಪ ಸಣಬಸಪ್ಪ ಸುಂಕಾಪುರರು ಹಾಸ್ಯಸಾಹಿತಿ ಎಂದೇ ಪ್ರಸಿದ್ಧರಾಗಿದ್ದರು. ಹಾಸ್ಯ ಪ್ರಬಂಧ, ನಾಟಕ, ಮಾತುಕತೆಗಳಲ್ಲಿ ಅವರ ಸದಭಿರುಚಿಯ ಸುಸಂಸ್ಕೃತ ಹಾಸ್ಯ ಎದ್ದು ಕಾಣುತ್ತಿತ್ತು. ಗ್ರಾಮೀಣ ಪರಿಸರದಲ್ಲಿ ಹುಟ್ಟಿಬೆಳೆದ ಅವರು ಜನಪದ ಹಾಡು, ಕಲೆಗಳಿಗೆ ಮಾರುಹೋಗಿದ್ದರು. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಕನ್ನಡ ಅಧ್ಯಯನ ಪೀಠದ ನಿರ್ದೇಶಕರಾಗಿ, ಪ್ರಾಧ್ಯಾಪಕರಾಗಿ ಅವರು ಮಾಡಿದ ಜಾನಪದ ಸೇವೆ, ನೀಡಿದ ಪ್ರೇರಣೆ ಚಿರಸ್ಮರಣೀಯ ವಾದದ್ದು. ಜೀವನ ಜೋಕಾಲಿ, ಕನ್ನಡ ಬಯಲಾಟ, ಜಾನಪದ ಸಾಹಿತ್ಯದರ್ಶನದ ಹಲವು ಸಂಪುಟಗಳು, ಜಾನಪದವನ್ನು ಕುರಿತ ಹಲವಾರು ಮೌಲಿಕ ಲೇಖನಗಳು ಸುಂಕಾಪುರರ ಜಾನಪದ ಕಾಳಜಿಗೆ ಸ್ಪಷ್ಟ ಸಾಕ್ಷಿಗಳಾಗಿವೆ.

ತಮ್ಮ ಬದುಕಿನ ಬಹುಭಾಗವನ್ನು ಜಾನಪದದ ಏಳಿಗೆಗೆ ಮೀಸಲಿಟ್ಟ ಡಾ. ಸುಂಕಾಪುರರ ಜೀವನ ಮತ್ತು ಸಾಧನೆಯನ್ನು ಡಾ. ಸಿ. ಕೆ. ನಾವಲಗಿಯವರು ಯಥಾವತ್ತಾಗಿ ದಾಖಲಿಸಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು